# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIV - 12 ಡಿಸೆಂಬರ್ 2006

**Rs. 5/-**




ಮೈಸೂರು ಅಸೋಸಿಯೇಶನ್‌ನಲ್ಲಿ ನವೆಂಬರ್ 15ರಂದು ನಡೆದ ಸಂಗೀತ ಕಚೇರಿಯಲ್ಲಿ ಗಾನ ಕಲಾ ಸರಸ್ವತಿ ವಿದುಷಿ
ಶ್ರೀಮತಿ ಎಂ. ಎಸ್. ಶೀಲ ಹಾಗೂ ಪಕ್ಕ
ವಾದ್ಯದಲ್ಲಿ ಶ್ರೀ ಆನೂರು ಅನಂತ ಕೃಷ್ಣ ಶರ್ಮ ಮತ್ತು ಶ್ರೀ ಯಶಸ್ವಿ.

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

# The Mysore Association, Bombay

## FORTHCOMING PROGRAMMES

## ಅಸೋಸಿಯೇಶನ್‌ನ ಮುಂಬರುವ ಕಾರ್ಯಕ್ರಮಗಳು



ಶುಕ್ರವಾರ, ಡಿಸೆಂಬರ್ **15, 2006** ಸಂಜೆ **7.30** ಕ್ಕೆ

ನೆಹ್ರೂ ಸೆಂಟರ್ ಸಭಾಂಗಣ, ವರ್ಲಿಯಲ್ಲಿ

# ಪಂಡಿತ್ ಜಸ್‌ರಾಜ್ ರವರಿಂದ

## ಹಿಂದೂಸ್ತಾನಿ ಗಾಯನ

**ಟಿಕೆಟ್ ದರ : ರೂ. 1000/- 750/- 500/-**

ಪ್ರಾಯೋಜಕರು : ಪ್ಯಾಂಟಲೂನ್ ರಿಟೇಲ್ (ಇಂಡಿಯಾ) ಲಿಮಿಟೆಡ್.

ಸಹ ಪ್ರಾಯೋಜಕರು : ಶಕ್ತಿ ಶುಗರ್ಸ್

ಉಪ ಪ್ರಾಯೋಜಕರು : ಸಿಯೆಟ್ ಟೈರ್ಸ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರ

---

ಶನಿವಾರ ಡಿಸೆಂಬರ್ **23, 2006** ಸಂಜೆ **6.00**ಕ್ಕೆ

ಕರ್ನಾಟಕ ಸರ್ಕಾರದ

# ಕನ್ನಡ ಪುಸ್ತಕ ಪ್ರಾಧಿಕಾರದ ಅಧಿಕೃತ

## ಮುಂಬೈ ಪುಸ್ತಕ ಮಳಿಗೆಯ ಉದ್ಘಾಟನೆ

ಮೈಸೂರು ಅಸೋಸಿಯೇಶನ್ ಸಭಾಂಗಣ

ಭಾನುವಾರ ಡಿಸೆಂಬರ್ **24, 2006** ಬೆಳಿಗ್ಗೆ **11.00** ಕ್ಕೆ

# ಕಾವ್ಯ ವಾಚಾನಾಭಿರುಚಿ ಕಮ್ಮಟ

ಶ್ರೀ ಜಿ. ಎಂ. ಹೆಗಡೆಯವರಿಂದ

*ಎಲ್ಲರಿಗೂ ಆದರದ ಸ್ವಾಗತ*

ಸಿದ್ಧರಾಮಯ್ಯ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಮಲ್ಲಿಕಾರ್ಜುನ ಸ್ವಾಮಿ
ರಿಜಿಸ್ಟ್ರಾರ್
ಕನ್ನಡ ಪುಸ್ತಕ ಪ್ರಾಧಿಕಾರ

ಎಸ್. ದೊರೈಸ್ವಾಮಿ
ಅಧ್ಯಕ್ಷರು
ಮೈಸೂರು ಅಸೋಸಿಯೇಶನ್

## ಗುರುವಾರ 4, ಜನವರಿ 2007 ಸಂಜೆ 7.00ಕ್ಕೆ

## ಮೈಸೂರು ಅಸೋಸಿಯೇಶನ್ ಸಭಾಂಗಣದಲ್ಲಿ

# ಪುಸ್ತಕ ಬಿಡುಗಡೆ ಸಮಾರಂಭ

| | | |
|---|---|---|
| ಗ್ರಂಥಕರ್ತರು | : | ಶ್ರೀ ಮ.ಅ.ನಾ. ಪ್ರಸಾದ್ |
| ಗ್ರಂಥ | : | 'ಗದ್ಯತ್ರಯಂ'<br>(ಶ್ರೀ ರಾಮಾನುಜಾಚಾರ್ಯರ 'ಗದ್ಯತ್ರಯಂ' ಸಂಸ್ಕೃತ ರಚನೆಯ ಇಂಗ್ಲಿಷ್ ಮತ್ತು ಕನ್ನಡ ಗದ್ಯಾನುವಾದ) |
| ಪ್ರಕಾಶಕರು | : | ಪಾಲಹಳ್ಳಿ ನಾರಾಯಣ ಐಯಂಗಾರ್ ಚಾರಿಟೀಸ್ |
| ಪ್ರಮುಖ ಅತಿಥಿಗಳು | : | ಡಾ\|\| ರಮೇಶ್ ಎಂ. ದವೆ,<br>ನಿರ್ದೇಶಕರು, ಅನಂತಾಚಾರ್ಯ ಇಂಡೋಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮುಂಬಯಿ |
| ವಕ್ತಾರರು | : | ಅ. ಭಾರದ್ವಾಜ್,<br>ಪ್ರಾಧ್ಯಾಪಕರು, ಅನಂತಾಚಾರ್ಯ ಇಂಡೋಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮುಂಬಯಿ |

## ಕನ್ನಡ ವಿಭಾಗ, ಮುಂಬಯಿ, ವಿಶ್ವವಿದ್ಯಾಲಯ

ಮತ್ತು

## ಮೈಸೂರು ಅಸೋಸಿಯೇಶನ್, ಮುಂಬಯಿ

*ಜಂಟಿಯಾಗಿ ಆಯೋಜಿಸಿರುವ*

## 'ಮೈಸೂರು ಅಸೋಸಿಯೇಶನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ'

ವಿಷಯ : ಬಿ. ಎಂ. ಶ್ರೀ. ಸಂಸ್ಮರಣೆ

ಉಪನ್ಯಾಸಕರು: ಶ್ರೀ ಎಸ್.ಎಲ್. ಶೇಷಗಿರಿರಾಯರು

ಸ್ಥಳ : ಮೈಸೂರು ಅಸೋಸಿಯೇಶನ್ ಸಭಾಂಗಣ

*ದಿನಾಂಕ ಮತ್ತು ಸಮಯ :*

**ಶನಿವಾರ 6 ಜನವರಿ 2007 ಸಂಜೆ 7ಕ್ಕೆ ಮತ್ತು**

**ರವಿವಾರ 7 ಜನವರಿ 2007 ಬೆಳಿಗ್ಗೆ 11.00 ಕ್ಕೆ**

ನಂತರ

ಬಿ. ಎಂ. ಶ್ರೀ ಗಾಯನ

ಮೈಸೂರು ಅಸೋಸಿಯೇಶನ್ ತಂಡದವರಿಂದ

## ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರು ಮತ್ತು ಮೈಸೂರು ಅಸೋಸಿಯೇಶನ್ ಮುಂಬೈ

ಜತೆಗೂಡಿ 'ಸುವರ್ಣ ಕರ್ನಾಟಕ'ದ ಅಂಗವಾಗಿ ಅರ್ಪಿಸುವ ಎರಡು ದಿನಗಳ ಅಪೂರ್ವ

# 'ಕರ್ನಾಟಕ ಸಂಗೀತ ಯಾತ್ರೆ'

**ಫೆಬ್ರವರಿ 17 ಶನಿವಾರ ಸಂಜೆ 4.30ಕ್ಕೆ ಉದ್ಘಾಟನೆ.**

ವಿದುಷಿ ಟಿ. ಎಸ್. ಸತ್ಯವತಿ ಅವರಿಂದ ಕರ್ನಾಟಕ ಸಂಗೀತದ ಬಗ್ಗೆ ಪ್ರಾತ್ಯಕ್ಷಿಕೆ.

ವಿದ್ವಾನ್ ಡಿ. ಬಾಲಕೃಷ್ಣ ಅವರಿಂದ ವೀಣಾವಾದನ

**ಫೆಬ್ರವರಿ 18ರ ರವಿವಾರ ಸಂಜೆ 4.30ಕ್ಕೆ**

ವಿದುಷಿ ಟಿ. ಎಸ್. ಸತ್ಯವತಿ ಮತ್ತು ತಂಡದ ಸಂಗೀತ ಕಚೇರಿ

ವಿದ್ವಾನ್ ಮೈಸೂರು ಮಂಜುನಾಥ್ ಮತ್ತು ಮೈಸೂರು ನಾಗರಾಜ ತಂಡದವರಿಂದ ಯುಗಳ ಪಿಟೀಲು ಕಚೇರಿ.

*ಎಲ್ಲರಿಗೂ ಆದರದ ಸ್ವಾಗತ.*

## ಮೈಸೂರು ಅಸೋಸಿಯೇಷನ್ನಿನ ಸದಸ್ಯರ ಮಿಲನ

ಮೈಸೂರು ಅಸೋಸಿಯೇಷನ್ 81ನೇ ವರ್ಷಕ್ಕೆ ಕಾಲಿಡುತ್ತಿದೆ. ಇದೇ ನವೆಂಬರ್ 11ರಂದು ಮೈಸೂರು ಅಸೋಸಿಯೇಷನ್ನಿನಲ್ಲಿ ಸದಸ್ಯರ ಸ್ನೇಹ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರುಗಳು ಹಾಜರಿದ್ದರು. ಅಧ್ಯಕ್ಷರಾದ ಶ್ರೀ. ಎಸ್. ದೊರೆಸ್ವಾಮಿ ಅವರು ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿದರು. ನಂತರ ಮಂಜುನಾಥಯ್ಯನವರು ಮಾತನಾಡಿ ಹಂತ ಹಂತವಾಗಿ ಬೆಳೆದು ಭವ್ಯವಾಗಿ ಮೆರೆಯುತ್ತಿರುವ ಅಸೋಸಿಯೇಷನ್ನಿನ ಆರಂಭ ಹೇಗೆ ಆಯಿತು, ಹೇಗೆ ಅಭಿವೃದ್ಧಿಗಾಗಿ ಮಂಡಿರುವ ಯೋಜನೆಯನ್ನು ತಿಳಿಸಿ ಕಟ್ಟಡಾಭಿವೃದ್ಧಿಗೆ ನಿಧಿ ಸಂಗ್ರಹಿಸಲು ಪಂ॥ಜಸರಜ್ ಅವರ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮವನ್ನು ತಿಳಿಸಿದರು. ಡಾ॥ಎಚ್. ಎಸ್. ಶ್ರೀನಿವಾಸ್ ಅವರು ಮಾತನಾಡಿ ಅಸೋಸಿಯೇಷನ್ನು ಎಲ್ಲರಿಗೂ ಒಂದು ಮನೆ ಇದ್ದಂತೆ, ಸದಸ್ಯರು ಒಂದೇ ಕುಟುಂಬದವರಂತೆ ಒಬ್ಬರೊಡನೊಬ್ಬರು ಹೇಗೆ ಪ್ರೀತಿ ವಿಶ್ವಾಸದಿಂದ, ಸ್ನೇಹ ಭಾವದಿಂದ ಇದ್ದಾರೆ ಎಂದು ಹಳೆಯ ಘಟನೆಗಳನ್ನೆಲ್ಲ ನೆನಪಿಸಿದರು. ಇಂದಿಗೂ ಅದೇ ರೀತಿಯ ಪ್ರೀತಿ ವಿಶ್ವಾಸ ಸದಸ್ಯರಲ್ಲಿ ಇದೆ ಎಂದರು. ಡಾ॥ ಮಂಜುನಾಥ್ ಅವರು ಮಾತನಾಡಿ ಅಸೋಸಿಯೇಷನ್ನಿಗೆ 81 ವರ್ಷವಾದರೂ ನಾವೆಲ್ಲರೂ 18 ವರ್ಷದವರ ಹುರುಪಿನಿಂದ ಕೆಲಸ ಮಾಡಿ ಅದರ ಏಳಿಗೆಗೆ ಪ್ರೋತ್ಸಾಹ ಹಾಗೂ ಸಹಕಾರ ನೀಡಬೇಕು. 81ನೇ ವರ್ಷದ ಉತ್ಸವವನ್ನು ಎಲ್ಲರೂ ಸೇರಿ ನಡೆಸಿಕೊಡ ಬೇಕು ಎಂದು ಹೇಳಿದರು. ನಂತರ ಊಟವಾಯಿತು. ಅಂದು ಅನೇಕ ಹಿರಿಯ ಸದಸ್ಯರುಗಳನ್ನು ನೋಡಲಾಯಿತು, ಎಲ್ಲರೂ ಟಿಕೆಟ್‌ಗಳನ್ನು ಮಾರಿ ಈ ಕಾರ್ಯಕ್ರಮಕ್ಕೆ ಸಹಾಯ ಮಾಡುತ್ತಾರೆಂಬ ಭರವಸೆ ಇದೆ.

## ಸಂಗೀತ ಶಿಬಿರ




ಸಂಗೀತ ಶಿಬಿರದ ಉದ್ಘಾಟನೆ ಶ್ರೀ ಮಂಜುನಾಥಯ್ಯ ಮತ್ತು ಶ್ರೀಮತಿ ಎಂ. ಎಸ್. ಶೀಲ ಅವರಿಂದ

ಮೈಸೂರು ಅಸೋಸಿಯೇಷನ್ನಿನಲ್ಲಿ ಹಲವಾರು ವರ್ಷಗಳಿಂದ ಸಂಗೀತದ ಶಿಬಿರವನ್ನೇರ್ಪಡಿಸಿ,ಸಾಗಿದೆ, ಈ ಶಿಬಿರದಲ್ಲಿ ತರಬೇತಿ ನೀಡಲು ಕರ್ನಾಟಕದ ಹೆಸರಾಂತ ಸಂಗೀತಗಾರರನ್ನು ಆಹ್ವಾನಿಸಲಾಗುತ್ತಿದೆ. ಶ್ರೀ ಆರ್. ಕೆ. ಶ್ರೀಕಂಠನ್, ಶ್ರೀ ಆರ್. ಕೆ. ಪದ್ಮನಾಭ, ಶ್ರೀಮತಿ ಸುಕನ್ಯಾ ಪ್ರಭಾಕರ್, ಶ್ರೀಮತಿ ಟಿ. ಎಸ್. ಸತ್ಯವತಿ ಹೀಗೆ ಅನೇಕ ಕಲಾವಿದರು ಇಲ್ಲಿ ಬಂದು ಒಳ್ಳೆಯ ತರಬೇತಿಯನ್ನು ಕೊಟ್ಟಿದ್ದಾರೆ. ಈ ವರ್ಷ ಶ್ರೀಮತಿ ಎಮ್. ಎಸ್. ಶೀಲಾ ಇವರನ್ನು ಆಹ್ವಾನಿಸಲಾಗಿತ್ತು. ಶ್ರೀಮತಿ ಎಮ್. ಎಸ್. ಶೀಲಾ ಅವರು ಖ್ಯಾತ ಸಂಗೀತಗಾರ ಶ್ರೀ ಆರ್. ಕೆ. ಶ್ರೀಕಂಠನ್ ಅವರ ಶಿಷ್ಯೆ, ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಪ್ರಥಮ ದರ್ಜೆಯ ಕಲಾವಿದರು ಚಿತ್ರಗಳಲ್ಲಿ ಸಂಗೀತವನ್ನು ಹಾಡಿದ್ದಾರೆ. ಜಾನಪದ ಹಾಗೂ



ಶಾಸ್ತ್ರೀಯ ಸಂಗೀತ ಎರಡರಲ್ಲೂ ಪ್ರಾವೀಣ್ಯತೆ ಹೊಂದಿರುವ ಕಲಾವಿದೆ. ಅತ್ಯುತ್ತಮ ಹಿನ್ನಲೆ ಗಾಯಕಿ ಎಂಬ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಅನೇಕ ಶಿಬಿರಗಳನ್ನು ನಡೆಸಿದ್ದಾರೆ. 'ಹಂಸಧ್ವನಿ ಕ್ರಿಯೇಷನ್ಸ್' ಎಂಬ ಸಂಸ್ಥೆಯನ್ನು ಕಳೆದ ಎಳು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಈ ಸಂಸ್ಥೆಯು ಪ್ರತಿ ವರ್ಷ ಉದಯೋನ್ಮುಖ ಕಲಾವಿದರಿಗೆ ಪ್ರೋತ್ಸಾಹವೀಯುತ್ತಾ ಕ್ಯಾಸೆಟ್ಸ್ ಮತ್ತು ಸಿ.ಡಿ.ಗಳನ್ನು ಹೊರತರುತ್ತಿದ್ದಾರೆ.

11ನೇ ತಾರೀಖು ಸಂಜೆ ಶ್ರೀ ಮಂಜುನಾಥಯ್ಯ ಹಾಗೂ ಶ್ರೀಮತಿ ಎಮ್. ಎಸ್. ಶೀಲಾ ಇವರು ಜ್ಯೋತಿಯನ್ನು ಬೆಳಗಿಸಿ ಶಿಬಿರವನ್ನು ಉದ್ಘಾಟಿಸಿದರು. ಅಂದಿನಿಂದ ಸತತವಾಗಿ 5 ದಿನ ತರಬೇತಿ ನಡೆಯಿತು. ಸುಮಾರು 20-22 ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಗುರುಶಿಷ್ಯರ ನಡುವೆ ಪರಸ್ಪರ ಸ್ನೇಹಮಯ ವಾತಾವರಣ ಕಲಿಯಲು ಅನುಕೂಲವಾಗಿತ್ತು. ಪ್ರತಿಯೊಂದು ಕೃತಿಯಲ್ಲೂ ಅರ್ಥಗಳನ್ನು ಹೇಳಿ ಪಾಠ ಮಾಡುತ್ತಿದ್ದರು. ವಿದ್ಯಾರ್ಥಿಗಳು ತಮ್ಮೆಲ್ಲ ಕೆಲಸಗಳನ್ನು ಬದಿಗೊತ್ತಿ ಆಸಕ್ತಿಯಿಂದ ಬಂದು ಕಲಿಯುತ್ತಿದ್ದರು.

ನವೆಂಬರ್ 15, ಬುಧವಾರದಂದು ಶಿಬಿರದ ಸಮಾರೋಪ ಅಂದು 6.30 ಘಂಟೆಗೆ ಕಾರ್ಯಕ್ರಮವು ಆರಂಭವಾಯಿತು. ಸ್ವಾಗತ ಭಾಷಣದ ನಂತರ ವಿದ್ಯಾರ್ಥಿಗಳು ಶಿಬಿರದಲ್ಲಿ ಕಲಿತ ವಿದ್ವಾನ್ ವೀಣೆ ಶೇಷಣ್ಣನವರ ಹಾಗೂ ವಿದ್ವಾನ್ ಮುತ್ತಯ್ಯ ಭಾಗವತರ ಕೃತಿಗಳನ್ನು ಪ್ರಸ್ತುತ ಪಡಿಸಿದರು. ಶುದ್ಧವಾದ ತಾಳ, ಲಯ ಶ್ರುತಿಗಳಿಂದ ಕೂಡಿದ ಈ ಕೃತಿಗಳು ಎಲ್ಲರಿಗೂ ಮೆಚ್ಚುಗೆಯಾದವು. ಕೌತುಕದ ಅಂಶ ಎಂದರೆ ಕೇವಲ ಐದೇ ಐದು ದಿನಗಳಲ್ಲಿ ಕಷ್ಟಕರವಾದ ಈ ಕೃತಿಗಳನ್ನು ಕಲಿತಿದ್ದಾರೆ, ಈ ಕೀರ್ತಿ ಶ್ರೀಮತಿ ಶೀಲಾ ಅವರಿಗೆ ಸಲ್ಲತಕ್ಕದ್ದು.

## ಶ್ರೀಮತಿ ಎಮ್. ಎಸ್. ಶೀಲಾ ಅವರ ಕಛೇರಿ

ನವೆಂಬರ್ 15, ಬುಧವಾರ ಸಂಜೆ 7.30ಕ್ಕೆ ಶ್ರೀಮತಿ ಎಮ್. ಎಸ್. ಶೀಲಾ ಅವರ ಕಛೇರಿಯನ್ನು ಏರ್ಪಡಿಸಲಾಗಿತ್ತು. ಕೇದಾರಗೌಳ ರಾಗದಲ್ಲಿ 'ಸ್ವಾಮಿ ದಯ ಜೂಡ' ಎಂಬ ವರ್ಣದಿಂದ ಕಛೇರಿಯು ಆರಂಭವಾಯಿತು. ನಂತರ ವಾಡಿಕೆಯಂತೆ ಪುರಂದರದಾಸರ ಕೃತಿ 'ವಂದಿಸುವುದಾದಿಯಲಿ ಗಣನಾಥನ' ಎಂಬ ಗಣಪತಿಯ ಪ್ರಾರ್ಥನೆ ನಾಟಿ ರಾಗದಲ್ಲಿ ಮತ್ತು ತ್ಯಾಗರಾಜರ 'ರಾಮಾ ನಿನ್ನೆ ನಮ್ಮಿನೇನು...' ಎಂಬ ಕೃತಿಯನ್ನು ಹಾಡಿ ಮೈಸೂರು ವಾಸುದೇವಾಚಾರ್ಯರ 'ಶ್ರೀ ಚಾಮುಂಡೇಶ್ವರಿ...' ಬಿಲಹರಿ ರಾಗದಲ್ಲಿ ಹಾಡಿದರು. ಸಾಮರಾಗದ 'ಅನ್ನಪೂರ್ಣೇ... ವಿಶಾಲಾಕ್ಷಿ' ಎಂಬ ದೀಕ್ಷಿತರ ಕೃತಿ ಶ್ರೋತೃಗಳಿಗೆ ಮೆಚ್ಚುಗೆಯಾಯಿತು. ತೋಡಿ ರಾಗದಲ್ಲಿ 'ಮೀನ ಲೋಚನೆ ಅಂಬ' ಮುತ್ತಯ್ಯ ಭಾಗವತರ ಕೃತಿಯ ನಂತರ ಷಣ್ಮುಖಿ ಪ್ರಿಯ ರಾಗದಲ್ಲಿ ಒಂದು ಸಣ್ಣ ಪಲ್ಲವಿಯನ್ನು ಹಾಡಿ ತನಿ ಬಿಟ್ಟರು. ಪುರಂದರ ದಾಸರ ಮತ್ತೊಂದು ಕೃತಿ 'ವೆಂಕಟರಮಣನೆ ಬಾರೋ', ಹಾಗೂ ಪು.ತಿ.ನ. ಅವರ ಜನಪ್ರಿಯ ಗಾನ 'ಆಲಿಸು ಕೃಷ್ಣನ ಕೊಳಲಿನಾ ಕರೆ'ಯ ನಂತರ ವೀಣೆಶೇಷಣ್ಣನವರ ತಿಲ್ಲಾನಾದೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು. ಇವರಿಗೆ ಮೃದಂಗದಲ್ಲಿ ಶ್ರೀ ಆನೂರು ಅನಂತಕೃಷ್ಣ ಶರ್ಮ ಮತ್ತು ಪಿಟೀಲಿನಲ್ಲಿ ಶ್ರೀ ಎಸ್. ಯಶಸ್ವಿ ಅವರು ಉತ್ತಮವಾಗಿ ಸಹಕರಿಸಿದರು. •



## ಅಕ್ಷರ ತತ್ವಪದ

ನೀರಿಲ್ಲದ ಕೆರೆ ಏತಕೋ? ಎಲೆ ಮನುಜ !
ವಿದ್ಯೆಯಿಲ್ಲದ ಬಾಳು ಏತಕೋ?
ಅಕ್ಷರ ತಿಳಿಯದ ಕಣ್ಣು ಏತಕೋ? ಎಲೆ ಮನುಜ
ಅಕ್ಷರ ಬರೆಯದ ಕೈ ಏತಕೋ? ನೀರಿಲ್ಲದ ||
ಉಪ್ಪಿಲ್ಲ ಊಟ ಏತಕೋ? ಎಲೆಮನುಜ |
ಮಾನವೀಯ ಗುಣವಿಲ್ಲದ ಜೀವವೇತಕೋ ?|
ದಯೆಯಿಲ್ಲದ ಧರ್ಮವೇತಕೋ | ಎಲೆಮನುಜ |
ನೀತಿ ನಿಯಮವಿಲ್ಲದ ಪ್ರೀತಿ ಏತಕೋ? ನೀರಿಲ್ಲದ |
ಶಾಲೆಗೆ ಕಳಿಸದ ತಾಯಿತಂದೆ ಏತಕೋ?| ಎಲೆಮನು |
ಬುದ್ಧಿವಾದ ಹೇಳದ ಗುರುಗಳೇತಕೋ?
ಕಲಿಯದವರಿಗೆ ಕಲಿಸದ ಬಾಳು ಏತಕೋ?| ಎಲೆ ಮನುಜ |
ಕಲಿತ ಋಣ ತೀರಿಸದ ವಿದ್ಯೆ ಏತಕೋ?| ನೀರಿಲ್ಲದ ||
ದುಡ್ಡೊಂದೇ ಬಾಳಿಗೆ. ದೊಡ್ಡಪ್ಪನಲ್ಲವೋ ಎಲೆಮನುಜ-
ಓದು ಬರಹ ಕಲಿಯದಿದ್ರ ಬೆಲೆ ಇಲ್ಲವೋ
ಕಲಿಯಲು ವಯಸ್ಸಿಗೆ ಮಿತಿಯಿಲ್ಲವೋ ಎಲೆ ಮನುಜ |
ಅಕ್ಷರ ಕಲಿತವರ ಬಾಳು ಚಂದವೋ? ನೀರಿಲ್ಲದ |
ಕಲಿಯುಗದ ಈ ಕರೆಯ ಮರೆಯಬೇಡವೋ | ಎಲೆ ಮನುಜ
ಮರೆತು ಬದುಕು ಹಾಳು ಮಾಡಬೇಡವೋ |
ಸಾರಿ ಸಾರಿ ಹೇಳುತಿಹವು ಕೋಪ ಬೇಡವೋ ಎಲೆ ಮನುಜ |
ಅನಕ್ಷರಸ್ಥನಾಗಿ ನೀನು ಬಾಳ ಬೇಡವೋ || ನೀರಿಲ್ಲದ ||

ಸಂಗ್ರಹಕಾರು : ಬಸವಣ್ಣಪ್ಪಾ ಬಿ. ಸಾವಳಗಿ
- (ಹಿರೋಳಿ) ಭಾರತರತ್ನ
ಇಂದಿರಾ ನಗರ, ಸೋಲಾಪುರ


## MATRIMONIALS

Wanted suitable Madhava Brahmin Graduate, Working Girl Bombay Based below 27 yrs, for a boy (31 yrs) Working in Finance Company as Associate Manager Contact Madhav R. Rao or Sudha Rao (25828090)

***

Wanted a suitable Smartha Brahmin boy for Babbur Kamme girl. Age : 24 yrs, Height : 5 ft. holds a diploma in Electronics, Works for a MNC in Bangalore. Makha Nakshatra 1st Pada, Parashara Gotra, Looking for a qualified, well settled boy with good family background.
Contact : Mr. Shrikantiah
Phone No. : 080 – 23722369

***

Madhva Brahmin B.A. Graduate Boy 38 / 5'9'' working in Reliance Communication Administration, invites proposals from Graduate Madhva / Smartha Kannada Girls 32/35, Average height 5'3'' for Matrimonial Alliance. Advertisement for better selection.
Interested parties kindly contact / call 022) 25638505/93227305806

# ದಿಟಕ್ಕೆ ಬಹುದೂರವಾದ "ಸತ್ಯಗಳು"

- ಡಾ. ಬಿ. ಆರ್. ಮಂಜುನಾಥ್

ನಮ್ಮ ನಿಜ ಜೀವನದಲ್ಲಿ, ನಮ್ಮನ್ನು ಪ್ರಶಿಕ್ಷಣಗಳಲ್ಲಿಯೂ, ನಮ್ಮನ್ನು ಆಳುವವರು, ಓದಿದವರೆಂದೆನಿಸುವವರು, ಹಾಗೂ ಸುತ್ತುವರೆದವರು, ಮರುಳು ಮಾಡುತ್ತಿರುತ್ತಾರೆ. ಪ್ರಚಾರವೇ ಪ್ರಧಾನವಾಗಿರುವ ನಮ್ಮ ''ಸಂತೆ ಪ್ರಪಂಚ''ದಲ್ಲಿ, ಪ್ರಚಾರ ಮಾಧ್ಯಮಗಳಿಂದ ಸುಳ್ಳುಗಳನ್ನೇ ದಿಟವೆಂದು ನಂಬಿಸಿ ಬಿಡುತ್ತಾರೆ. ''ಸುಳ್ಳನ್ನು ಮತ್ತೆ ಮತ್ತೆ ಹೇಳಿದರೆ ಕೇಳಿ ಕೇಳಿ ನಮಗೆ ಅದೇ ದಿಟವೆಂದು ಮನವರಿಕೆಯಾಗಿ, ದಿಟವನ್ನು ಕೇಳಿದರೂ, ಅದೇ ಸುಳ್ಳೆಂದು ಪರಿಗಣಿಸುತ್ತೇವೆ.

ನಾನು ಇಲ್ಲಿ ಹಲವಾರು ಅಂತಹ ಸಮಕಾಲೀನ ''ಸತ್ಯ''ಗಳನ್ನು ಉದಹರಿಸುತ್ತೇನೆ.

೧. ಬೆಂಗಳೂರು, ಇಂದಿನ ಕರ್ನಾಟಕದ ರಾಜಧಾನಿ. ಇದೀಗ 'ಬ್ಯಾಂಗಲೋರ್' ಅನ್ನುವ ಹೆಸರನ್ನು 'ಬೆಂಗಳೂರು' ಎಂದು ಮರು ನಾಮಕರಣ ಮಾಡಲಾಗುತ್ತಿದೆ. ಈ ಊರಿಗೆ ಈ ಹೆಸರು ಹೇಗೆ ಬಂದಿತೆಂಬುದನ್ನು ಕರ್ನಾಟಕ ಸರ್ಕಾರ ಎಲ್ಲಾ ಶಾಲಾ ಪಠ್ಯ ಪುಸ್ತಕಗಳಲ್ಲಿ, ಹಾಗೂ ವಾರ್ತಾ ಪ್ರಚಾರದಲ್ಲಿ ದಾಖಲು ಮಾಡಿದೆ.

ಕೆಂಪೇಗೌಡ ಮಾಗಡಿಯನ್ನು ಆಳುತ್ತಿದ್ದ, ಹಾಗೂ ವಿಜಯನಗರದ ರಾಜರ ಅಧೀನದಲ್ಲಿದ್ದ ಒಬ್ಬ ಪಾಳೆಯಗಾರ. ಇವನು ಆವತಿ ಪ್ರಭುಗಳಾಗಿದ್ದ ಯಲಹಂಕ ಪ್ರಭು ಜಯ ಗೌಡನ ವಂಶಜ. ಇವನು 1513ರಿಂದ 1569ರ ವರೆಗೆ ಮಾಗಡಿಯನ್ನು ಆಳಿದ. ಕೆಂಪೇಗೌಡ ಒಂದು ದಿನ ದಟ್ಟಡವಿಯಲ್ಲಿ ಸಿಕ್ಕು ಬಳಲಿದಾಗ, ಅಲ್ಲಿಯೇ ಗುಡಿಸಲಿನಲ್ಲಿ ಇದ್ದ ಮುದುಕಿ ಒಬ್ಬಳು, ಆತನಿಗೆ ಬೇಯಿಸುತ್ತಿದ್ದ ಕಾಳನ್ನೂ, ನೀರನ್ನೂ ಇತ್ತು ದಣಿವಾರಿಸಿದ್ದರಿಂದ, ಈ ಜಾಗಕ್ಕೆ ಕೆಂಪೇ ಗೌಡ ''ಬೆಂದಕಾಳೂರು'' ಅಥವಾ ''ಬೆಂಗಳೂರು'' ಎಂದು ಹೆಸರಿಟ್ಟನೆಂಬುದು, ಈ ಒಂದು ನೂರು ವರ್ಷದ ಪ್ರಚಾರ.

ದಿಟವೇನು?

ಸ್ಥಳ ಜಾನಪದ ಕತೆಯ ಅನುಸಾರ 12ನೇ ಶತಮಾನದಲ್ಲಿ ಹೊಯ್ಸಳ ಚಕ್ರವರ್ತಿ ಇಮ್ಮಡಿ ವೀರ ಬಲ್ಲಾಳ ಬೇಟೆಗೆ ಹೋಗಿದ್ದಾಗ ಮುದುಕಿಯೊಬ್ಬಳು ಬೆಂದಕಾಳುಗಳನ್ನು ಇತ್ತು ಅವನ ಹಸವನ್ನು ತೀರಿಸಿದ್ದರಿಂದ ಸಂಪ್ರೀತನಾದ ಹೊಯ್ಸಳೇಶ್ವರ ಆ ಮುದುಕಿಯ ಗೌರವಾರ್ಥವಾಗಿ ಅಲ್ಲಿ ಒಂದು ಊರು ಸ್ಥಾಪಿಸಿ ಅದಕ್ಕೆ ಬೆಂಗಾಳೂರು ಎದು ಹೆಸರಿಟ್ಟನೆಂಬುದು 19ನೇ ಶತಮಾನದ ವರೆಗಿನ ಪ್ರಚಲಿತ ಕಥೆ.

ಆದರೆ ಬೆಂಗಳೂರಿನಲ್ಲೂ, ಸುತ್ತಮುತ್ತಲೂ, ಶಿಲಾಯುಗ, ಹಾಗೂ ಲೋಹ ಯುಗದಂದಿನಿಂದಲೂ ಜನವಸತಿ ಇತ್ತೆಂಬುದು ಅನೇಕ ಅವಶೇಷ, ಪಾತ್ರೆ ಪಡಗಗಳಿಂದ ವೇದ್ಯವಾಗುತ್ತದೆ. ೯ನೆಯ ಶತಮಾನದ ಒಂದು ಶಿಲಾ ಶಾಸನ ಬೆಂಗಳೂರಿನ ಬಳಿಯ ಬೇಗೂರಿನಲ್ಲಿ ದೊರಕಿದ್ದು, ಅದರಲ್ಲಿ 'ಬೆಂಗಳೂರು' ಎಂಬ ಹೆಸರೇ ಕಂಡು ಬಂದಿದೆ.

ಬೆಂಗಳೂರಿನಲ್ಲಿ ''ಅತಿ ಪ್ರಾಚೀನವಾದ (೧೨೦೦ ವರ್ಷಗಳ) ದೇವಾಲಯ ಒಂದಿದೆ. ಇದು ಟಿಪ್ಪುವಿನ ಅರಮನೆಗೆ ಹೊಂದಿಕೊಂಡಿರುವ ''ಶ್ರೀನಿವಾಸ ದೇವಸ್ಥಾನ'' ಶ್ರೀನಿವಾಸ ಎಂಬುದು, ರಾಮಾನುಜರ ನಂತರ ಶಿಷ್ಯ ಜನರಿಟ್ಟ ಹೊಸ ಹೆಸರು, ಆ ದೇವರ ಮೂಲ ಹೆಸರು, ''ವೆಂಕಟ ರಾಯ'' - ''ವೆಂಗಡರಾಯ '' - ''ವೆಂಗರಾಯ'' ಎಂದು ಹಳೆ ಕನ್ನಡದಲ್ಲಿ ಟ - ಡ - ಳ - ದ ಭೇದವಿಲ್ಲ.

ಈ ''ವೆಂಗಳ''ನ ಊರೇ ''ವೆಂಗಳೂರು'' → ''ಬೆಂಗಳೂರು'' ಆದದ್ದು ಸರ್ವ ವಿಧಿತ. ಇದೇ ವರ್ಷ ತೀರಿಕೊಂಡ ಶ್ರೀ ಎಸ್.ಕೆ. ರಾಮಚಂದ್ರರಾಯರು ಇದರ ಬಗ್ಗೆ ಅಧ್ಯಯನ ನಡೆಸಿದ್ದಲ್ಲದೆ ಶಾಸನಗಳ ದಾಖಲೆಗಳನ್ನು ನೀಡಿದ್ದಾರೆ. ಕೆಂಪೇಗೌಡ ಮಾಡಿದ ಕೆಲಸವೆಂದರೆ, ಊರಿನ ನಾಲ್ಕೂ ಮೂಲೆಗೆ ಗೋಪುರಗಳನ್ನು ಕಟ್ಟಿಸಿ, ಕೋಟೆಗೆ, ವೆಂಗಳನ ಹಾಗೂ ಗವಿ ಗಂಗಾಧರೇಶ್ವರನ ಗುಡಿಗಳಿಗೆ ದುರಸ್ತಿ ಮಾಡಿಸಿದುದೇ ಆಗಿದ್ದ ಹೊರತು, ಊರಿಗೆ ಹೆಸರಿಕ್ಕಿದ್ದಲ್ಲ. ಆದರೆ ಇಂದಿನ ರಾಜಕೀಯ ವಾತಾವರಣದಲ್ಲಿ, ವೆಂಗಳರಾಯನಿಗಿಂತ, ಕೆಂಪೇಗೌಡನಿಗೇ ಓಟಿನ ಬಲವಿರುವುದರಿಂದ, ೨೦ನೆ ಶತಮಾನದ ಕಥೆಗೆ ಹೆಚ್ಚಿನ ಮತ ಬರುವುದು ಏನೂ ಸೋಜಿಗವಿಲ್ಲ.

೨. ಸ್ವಾತಂತ್ರ್ಯದ ನಂತರ ಆದ ಭಾಷಾವಾರು ವಿಂಗಡನೆಯ ಜಂಜಾಟದಲ್ಲಿ ಶೋಲಾಪುರ ಸಿಕ್ಕಿ ಬಿದ್ದಿದೆ. ಈಗ ಮಹಾರಾಷ್ಟ್ರದಲ್ಲಿ ಶೋಲಾಪುರ ಅಡಕವಾಗಿದೆ. ನಗರದ ರೈಲ್ವೇ ನಿಲ್ದಾಣದ ಮುಂಭಾಗದಲ್ಲಿ, ನಗರಪಾಲಿಕೆ ಒಂದು ಶಿಲಾಫಲಕವನ್ನು ಸ್ಥಾಪನೆ ಮಾಡಿದೆ. ಇದರ ಮೇಲೆ ಕೆತ್ತಿರುವ ಐತಿಹ್ಯವನ್ನು ಓದಿದಾಗ, ''ಇಲ್ಲಿ ಮೊದಲು ೧೬ (ಸೋಲಾಹ್) ಹಳ್ಳಿಗಳಿದ್ದರಿಂದ ಈ ನಗರಕ್ಕೆ ಸೋಲಾಪುರವೆಂದು ಹೆಸರು ಬಂದಿದೆಯೆಂಬ ದಾಖಲೆ ಕಂಡು ಬರುತ್ತದೆ.

ದಿಟವೇನು?

ಸೋಲಾಪುರದಲ್ಲಿ ಸಿದ್ಧೇಶ್ವರನ ಗುಡಿಯೊಂದಿದೆ. ಕನ್ನಡ-ಮರಾಠಿ ದಾಖಲೆಗಳೆರಡೂ ಇಲ್ಲಿ ೧೨ನೆಯ ಶತಮಾನದಲ್ಲಿದ್ದ ಶರಣಮುನಿ ಸಿದ್ಧರಾಮನ ನೆಲೆ ಇದಾಗಿತ್ತೆಂಬುದನ್ನು ಸಾರುತ್ತವೆ. ಕನ್ನಡದ ಹಳೆಯ ಕಾವ್ಯಗಳಲ್ಲಿ ಹಾಗೂ ವೀರಶೈವ ಶರಣ ಸಾಹಿತ್ಯದಲ್ಲಿ, ಈತನನ್ನು 'ಸೊನ್ನಲಿಗೆ'ಯ ಸಿದ್ಧರಾಮನೆಂದೆ ಕರೆಯಲಾಗುತ್ತದೆ. 'ಅಲಿಗೆ' ಎಂದರೆ 'ಕೊಪ್ಪ' 'ಸಂದ್ರ' 'ಪಾಳೆಯ' ಎಂದೇ ಅರ್ಥ. ಜನವಸತಿಗೆ ಇನ್ನೊಂದು ಹೆಸರು.

ಸೊನ್ನಲಿಗೆ ಕಾಲಕ್ರಮೇಣ ದೊಡ್ಡದಾದಾಗ 'ಸೊನ್ನಲಾಪುರ' ವಾಯಿತು. ಕಾಲಾಂತರದಲ್ಲಿ ಕನ್ನಡದ ವಾಡಿಕೆಯಂತೆ 'ನ್ನ' ಲೋಪವಾಗಿ ಸೋಲಾಪುರವಾಯಿತು. ಅಷ್ಟೇ, ಇದು ಇತಿಹಾಸ, ೧೮, ೧೯ನೆಯ ಶತಮಾನದಲ್ಲಿ ಪೇಶ್ವಾ ಸಾಮ್ರಾಜ್ಯ ಪ್ರಸರಿಸುತ್ತಿದ್ದಾಗ, ಮರಾಠಾ ನಾಯಕನೊಬ್ಬನನ್ನು ಸೊಲ್ಲಾಪುರ ದಲ್ಲಿ ನೇಮಿಸಿದಾಗ, ವಾಡೆಯ ಸುತ್ತಮುತ್ತ ಮರಾಠಿಯ ಪ್ರಾಬಲ್ಯ ಹೆಚ್ಚಾಗಿ, ನಂತರ ಸ್ಥಳೀಯ ವೀರಶೈವ ಜಂಗುಳಿಯೂ ಮರಾಠಿಗೆ ಒತ್ತುಕೊಟ್ಟಾಗ, ನಗರದಲ್ಲಿ ಮರಾಠಿಗರೇ ಹೆಚ್ಚಾದರು. ಹೀಗೆ ಸಿದ್ಧ ರಾಮನ ಸೊನ್ನಲಿಗೆ, 'ಶೋಲಾಪುರ' ವಾಗಿದ್ದೇ ಅಲ್ಲದೆ, ಸಿದ್ಧರಾಮನೂ ಕೂಡ ಸಿದ್ಧೇಶ್ವರನಾದ. ಊರಿನ ಕನ್ನಡದ ಮುಖಂಡರು ಇದುವರೆಗೂ, ನಗರ ಪಾಲಿಕೆ ಹಾಕಿರುವ ಶಿಲಾ ಫಲಕದ ವಿರುದ್ಧ ಧ್ವನಿ ಎತ್ತಿಲ್ಲ. ಕಾಲಕ್ರಮೇಣ, ಈ ಶಿಲಾಫಲಕ, ಶಿಲಾಶಾಸನ 'ವಾಗಿ, 'ಸತ್ಯ'ವನ್ನು ಎತ್ತಿ ಹಿಡಿಯುವುದರಲ್ಲಿ ಸಫಲವಾಗುತ್ತದೆ.

೩. ನಮ್ಮ ದೇಶಕ್ಕೆ 'ಭಾರತ'ವೆಂದು ಹೆಸರು ಬಂದಿರುವುದು. ಮಹಾಭಾರತದಲ್ಲಿ, ಕುರುವಂಶದ ರಾಜ ದುಷ್ಯಂತ ಹಾಗೂ ಶಕುಂತಲೆಯ ಮಗನಾದ ಭರತನಿಂದಲೇ ಎಂದು ಇನ್ನೂ, ಬಹುಮಂದಿ ಏನು, ಎಲ್ಲಾ ಪ್ರಜೆಗಳ ನಂಬಿಕೆ''. ಈತನ ಹೆಸರು, ಸರ್ವದಮನ. ಈ ಭರತನಿಂದಲೇ, ಈ ಮಹಾಕಾವ್ಯಕ್ಕೆ, ಮಹಾಭಾರತ, ಎಂದು ಹೆಸರು ಬಂದಿದೆ ಎಂಬುದನ್ನು, ನಮ್ಮ ಎಲ್ಲಾ ಹೆಸರಾಂತ ಪಂಡಿತರು ಸಾರಿ ಸಾರಿ ಹೇಳಿದ್ದಾರೆ.

ದಿಟವೇನು?

ಭರತನೆಂಬುದು ಹಿಂದೆ ಬಹಳ ಸಾಮಾನ್ಯವಾದ ಹೆಸರು ರಾಮನ ತಮ್ಮ ಭರತ, ಜಡ ಭರತನೆಂಬ ಮುನಿ, ಭರತಶಾಸ್ತ್ರದ ಮುನಿ ಭರತ, ಋಷಭದೇವ ಜಯಂತಿಯ ಮಗ ಭರತ. ಇವರೆಲ್ಲರೂ ಬಹಳ ಪ್ರಸಿದ್ಧರೇ, ಆದರೆ ಧಾತುವಿನ ಮೂಲಕ ನೋಡಿದರೆ ಇದು - 'ಭರ್ತ' ಎಂಬ ಪದದ ರೂಪಾಂತರ. ಭರ್ತ ಎಂದರೆ ಒಡೆಯ, ಯಜಮಾನ, ಆದಿ ಪುರಾಣಗಳಲ್ಲಿಯೇ, ಈ ನಾಡಿಗೆ 'ಭಾರತ'ವೆನ್ನುವ ಹೆಸರು ಏಕೆ ಬಂದಿತೆಂಬುದನ್ನು ಸ್ಪಷ್ಟ ಪಡಿಸಲಾಗಿದೆ. ''ಋಷಭದೇವ'' ಅಥವಾ ''ನಾಭಿರಾಜ'' ಅಥವಾ ''ಆದಿನಾಥ'ನ'' ಮೊದಲನೆಯ ಮಗನಾದ ಭರತನಿಂದಲೇ ಈ ನಾಡಿಗೆ ಭಾರತವೆಂದು ಹೆಸರಾಯಿತು ಎಂಬುದು ಯಾವ ಗೊಂದಲವಿಲ್ಲದೆ ಸ್ಪಷ್ಟವಾಗಿದೆ.

ಋಷಭದೇವ ತನ್ನ ಎಲ್ಲಾ ಮಕ್ಕಳಿಗೂ ತನ್ನ ಸಾಮ್ರಾಜ್ಯವನ್ನು ಹಂಚಿ ತಪಸ್ಸಿಗೆ ಹೋಗಿ, ನೀರು ಅನ್ನಗಳನ್ನು ತ್ಯಜಿಸಿ ಕೃಷಿಸಿ ತನ್ನ ಪರಿಸರದಲ್ಲಿ ಲೀನವಾಗಿ ಹೋದ. ಭರತನ ಕೋಶಾಗಾರದಲ್ಲಿ ಚಕ್ರವೊಂದು ಉದಿಸಿದಾಗ ಅವನ ಮಂತ್ರಿಗಳು ಅವನಿಗೆ. ಇದು ಅವನು ಅಜೇಯನೆಂಬುದನ್ನು ಸಾಂಕೇತಿಸುತ್ತದೆ, ಎಂದರು. ಚಕ್ರ ಅವನ ಸಾಮ್ರಾಜ್ಯದಿಂದ ಹೊರಟು ದೇಶದೇಶಕ್ಕೆ ಸುತ್ತಲಾರಂಭಿಸಿತು. ಭರತ ತನ್ನ ಸೈನ್ಯವನ್ನು ಕರೆದುಕೊಂಡು ಚಕ್ರವನ್ನೇ ಹಿಂಬಾಲಿಸಿ ಮಿಕ್ಕ ಎಲ್ಲಾ ರಾಜರನ್ನು ಗೆದ್ದು ತನ್ನ ತಮ್ಮಂದಿರನ್ನೂ ಗೆಲ್ಲುತ್ತಾನೆ. ಆದರೆ ಅವನ ತಮ್ಮನೊಬ್ಬನಾದ ಬಾಹುಬಲಿಯ ರಾಜಧಾನಿ, ಮಾಹಿಷ್ಮತಿಗೆ ಬಂದಾಗ, ಚಕ್ರ ಹೋಗದೆ ಆಚೆಯೇ ತಿರುಗುತ್ತಾ ನಿಲ್ಲುತ್ತದೆ. ಅಣ್ಣತಮ್ಮಂದಿರಿಗೆ ಕಾಳಗವಾಗಿ, ಎಲ್ಲದರಲ್ಲಿಯೂ ಬಾಹುಬಲಿಯೇ ಗೆಲ್ಲುತ್ತಾನೆ. ಆದರೆ ಗೆದ್ದ ಬಾಹುಲಿಗೆ ತನ್ನ ಜಯದ ಬಗ್ಗೆ ಹಾಗೂ ಅದಕ್ಕೆ ಕಾರಣವಾದ ಹೆಮ್ಮೆಯ ಬಗ್ಗೆ ಜಿಗುಪ್ಸೆಯಾಗಿ ರಾಜ್ಯವನ್ನು ಅಣ್ಣನಿಗೆ ಬಿಟ್ಟುಕೊಟ್ಟು, ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದು, ಗೊಮ್ಮಟನಾಗಿ ನಿಲ್ಲುತ್ತಾನೆ. ಭರತ ಇಡೀ ನಾಡಿಗೆ ರಾಜನಾಗುತ್ತಾನೆ. ಅವನು ಚಕ್ರವನ್ನೇ ಹಿಂಬಾಲಿಸಿ ನಡೆದುದರಿಂದ ಅವನು, 'ಚಕ್ರವರ್ತಿ'ಯಾಗುತ್ತಾನೆ. ಈ ಜಂಬೂದ್ವೀಪಕ್ಕೆ ಅವನೇ ಮೊಟ್ಟಮೊದಲಿಗ ಚಕ್ರವರ್ತಿಯಾದುದರಿಂದ ಈ ನಾಡಿಗೆ ಅವನ ಹೆಸರಾಗಿ, 'ಭಾರತ'ವಾಯಿತು. ಋಷಭದೇವ ಸನಾತನ ಧರ್ಮದವನಾದರೂ ಕೂಡ, ಜಿನಧರ್ಮ ಅವನನ್ನು ಆದಿನಾಥನೆಂದು ಪರಿಗಣಿಸಿದ್ದರಿಂದ ಅವನ ಹಾಗೂ ಅವನ ಸಂತತಿಗೆ ಸಲ್ಲಬೇಕಾದ ಮಾನ್ಯತೆ ಸಿಗಲಿಲ್ಲವೇ ಎನ್ನುವುದು ಚರ್ಚಾಸ್ಪದ.

೪. ಭಾರತದ ಎಲ್ಲಾ ಭಾಷೆಗಳಿಗೂ ಸಂಸ್ಕೃತವೇ ತಾಯಿಬೇರು.

ದಿಟವೇನು?

ಭಾಷಾ ಶಾಸ್ತ್ರಜ್ಞರು ಎಲ್ಲಾ ಭಾಷೆಗಳನ್ನೂ ಅವುಗಳ ಕ್ರಿಯಾಪದ, ಸರ್ವನಾಮಗಳು ಹಾಗೂ ವ್ಯಾಕರಣವನ್ನು ಅಧ್ಯಯನ ಮಾಡಿ, ಬೇರೆ ಬೇರೆ ಬುಡಕಟ್ಟಿಗೆ ಭಾಷೆಗಳನ್ನು ವಿಂಗಡಿಸಿದ್ದಾರೆ. ಸಂಸ್ಕೃತ ಇಂಡೋ-ಜರ್ಮನ್ ಭಾಷೆಗಳ ಬುಡಕಟ್ಟಿಗೆ ಸೇರಿದೆ. ಭಾರತದ ಇನ್ನಿತರ ಭಾಷೆಗಳನ್ನು ದ್ರಾವಿಡ, ಮಂಗೋಲಾಯ್ಡ್, ಹಾಗೂ ವಷ್ಟ ಭಾಷೆಗಳ ಬುಡಕಟ್ಟಿಗೆ ಸೇರಿಸಿದ್ದಾರೆ. ಕನ್ನಡ ದ್ರಾವಿಡ ಭಾಷೆಗಳ ಬುಡಕಟ್ಟಿಗೆ ಸೇರಿದ್ದಾಗಿದೆ. ದ್ರಾವಿಡ ಭಾಷೆಗಳು ಕೇವಲ ದಕ್ಷಿಣ ಭಾರತದಲ್ಲಿಯೇ ಇರದೆ, ಬಲೂಚಿಸ್ತಾನದಲ್ಲಿ (ಕುದುಖ್), ಮಧ್ಯ ಪ್ರದೇಶದಲ್ಲಿ (ಬ್ರಾಹುಯಿ) ಮತ್ತು ನೇಪಾಲ-ಭಾರತದ ಗಡಿಯಲ್ಲಿಯೂ ಇವೆ.

ಸರ್ವನಾಮಗಳಾದ ಕಣ್ಣು, ಮೂಗು ಕಿವಿ, ಕೈ,ಕಾಲು, ಊಟ, ಹೂವು ಆವು, ಕುದುರೆ, ಆನೆ, ಮುಂತಾದವುಗಳು ದ್ರಾವಿಡ ಪದಗಳಾಗಿವೆ. ಹಾಗೆಯೇ ಓದು, ತಿನ್ನು, ಹಾಡು, ಕಿರಿ, ನಡೆ, ಮಾಡು ಮುಂತಾದವುಗಳು ದ್ರಾವಿಡ ಕ್ರಿಯಾಪದಗಳಾಗಿವೆ. ವ್ಯಾಕರಣವೂ ಕೂಡಾ ಸಂಸ್ಕೃತ ವ್ಯಾಕರಣಕ್ಕಿಂತ ಬೇರೆಯಾಗಿಯೇ ಇದೆ. ಆಕಳು, ಮಗು, ಇವುಗಳಲ್ಲದೇ ಯಾವ ನಿರ್ಜೀವ ವಸ್ತುಗಳಿಗೂ ಲಿಂಗ ಪ್ರಯೋಗವಿಲ್ಲ. ''ಇಕಾರಾಂತ ಸ್ತ್ರೀಲಿಂಗೇ'' ಅನ್ನುವುದು ದ್ರಾವಿಡ ಭಾಷೆಗಳಿಗೆ ಅನ್ವಯವಾಗುವುದಿಲ್ಲ. ಅಂತೆಯೇ, ಎರಡು ನಾಮಪದಗಳನ್ನು ಜೋಡಿಸುವಾಗ Conjunctionನ ಅಗತ್ಯವಿಲ್ಲ. ಉದಾಹರಣೆಗೆ ''ಅಮ್ಮ, ಮಗ, ಇಬ್ಬರೂ ಹೋಗುತ್ತಾ ಇದ್ದಾರೆ''. ಇಲ್ಲಿ 'ಮತ್ತು' ಅನ್ನುವ ಪದದ ಅಗತ್ಯವಿಲ್ಲ. ಇದು ಕೇವಲ ಹೊಸಗನ್ನಡ ಪ್ರಯೋಗವಷ್ಟೆ. ಕನ್ನಡಕ್ಕೆ ವ್ಯಾಕರಣವನ್ನು ಶಿಷ್ಟವಾಗಿ ಮೊದಲು ಬರೆದ ಪಂಡಿತರು ಸಂಸ್ಕೃತ ವಿದ್ವಾಂಸರೇ ಆದುದರಿಂದ, ಅವರುಗಳು ತಮಗೆ ತಿಳಿದ ಪಾಣಿನಿಯ ವ್ಯಾಕರಣವನ್ನೇ ತುರುಕಿದರು. ಸಂಧಿಗಳಲ್ಲಿ ಕೇವಲ ಲೋಪಸಂಧಿ, ಆದೇಶ ಸಂಧಿಗಳು ಮಾತ್ರ ಕನ್ನಡಕ್ಕೆ ಅನ್ವಯ. ಇನ್ನಿತರ ಆಗಮಸಂಧಿ ಸವರ್ಣದೀರ್ಘ ಸಂಧಿಗಳು ಕೇವಲ ಸಂಸ್ಕೃತ ಶಬ್ದಗಳಿಗೇ ಮಾತ್ರ ಅನ್ವಯ. ಇಂತೆಯೇ ಕರ್ತರೀ, ಕರ್ಮಣೀ ಪ್ರಯೋಗಗಳೂ ಕೂಡ. ಕರ್ಮಣೀ ಪ್ರಯೋಗ ಕನ್ನಡಕ್ಕೆ ಹೊರತು.

''ಹಾಡು ಸೀತೆಯಿಂದ ಹಾಡಲ್ಪಟ್ಟಿತು'' ಅನ್ನುವುದು ನಗೆಗೀಡು. ಇದಕ್ಕಾಗಿಯೇ ಈ 'ಸಂಸ್ಕೃತ ವ್ಯಾಕರಣ' ಕನ್ನಡ ಮಕ್ಕಳಿಗೆ ತಿಳಿಯುವುದೇ ಇಲ್ಲ.

ಸಂಸ್ಕೃತದಿಂದ ಅನೇಕ ಪದಗಳು ಅದರಲ್ಲೂ ನಾಮ ಪದಗಳನ್ನು ದ್ರಾವಿಡ ಭಾಷೆಗಳು ಎರವಲಾಗಿ ಪಡೆದಿದೆ ಎನ್ನುವುದು ದಿಟ. ಇದರಲ್ಲಿ ಹೆಚ್ಚಳಿಕೆ ಏನೂ ಇಲ್ಲ. ಎರಡು ಜನಾಂಗಗಳು ಹತ್ತಿರಕ್ಕೆ ಬಂದಾಗ ಕೊಟ್ಟು ತರುವುದು ಸಾಮಾನ್ಯ. ಮುಂಬಯಿಯಲ್ಲಿ ಹುಟ್ಟಿದ ಮಕ್ಕಳೆಲ್ಲಾ, ಪೊರಕೆಗೆ, 'ಝಾಡೂ' ಎಂದೇ ಹೇಳುತ್ತವೆ. ಅಂತೆಯೇ ಸಂಸ್ಕೃತವೂ ಹಲವಾರು ದ್ರಾವಿಡ ಪದಗಳನ್ನು ಎರವಲು ಪಡೆಯಿತು ಎಂಬುದು ಗಮನಾರ್ಹ. ''ಮೀನು ನೀರು, ಮಲಯ, ಪುರ, ಪುಷ್ಪ ಕುಂಡ, ಮುಂತಾದ ಹಲವಾರು ಶಬ್ದಗಳು ದ್ರಾವಿಡವೇ, ಸಂಸ್ಕೃತವಲ್ಲ.

ಆದರೆ ನಾವು ಚಿಕ್ಕವರಾಗಿದ್ದಾಗಿಂದ ನಮ್ಮ ತಲೆಗಳನ್ನು 'ಪಂಡಿತೋತ್ತಮ'ರುಗಳು ಚೆನ್ನಾಗಿ 'ತೊಳೆದಿದ್ದರಿಂದ', ಈಗ ''ಸಂಸ್ಕೃತ, ಕನ್ನಡಕ್ಕೆ ತಾಯಿಬೇರು'' ಅನ್ನುವುದು 'ಸತ್ಯ'ವಾಗಿ ಹೋಗಿದೆ.

೫. ''ನಮ್ಮ ರಾಷ್ಟ್ರ ಭಾಷೆ ಹಿಂದಿ''

ಚಿಕ್ಕಂದಿನಿಂದ ಪ್ರತಿಯೊಬ್ಬ ಮಗುವಿಗೂ ಶಾಲೆಗಳಲ್ಲಿ ಹಿಂದಿ, ನಮ್ಮ ದೇಶದ ರಾಷ್ಟ್ರ ಭಾಷೆ. ಮಿಕ್ಕೆಲ್ಲಾ ಭಾಷೆಗಳು ಪ್ರಾಂತೀಯ ಭಾಷೆ ಅಥವಾ ರಾಜ್ಯ ಭಾಷೆ, ಎಂದು ಪ್ರತಿಯೊಬ್ಬ ಅಧ್ಯಾಪಕರು ಹೇಳಿ ಹೇಳಿ, ನಮ್ಮ ಮಕ್ಕಳಿಗೆ ಇದು 'ಸತ್ಯ'ವೆಂದು ಮನದಟ್ಟಾಗಿದೆ. ಸಂವಿಧಾನದ ಹೆಸರನ್ನು ಕೇಳಿದ್ದೇ ಹೊರತು, ಓದದ ಈ ಅಧ್ಯಾಪಕರುಗಳು ಈ ''ಜ್ಞಾನವನ್ನು'' ಸುಮಾರು ೫೬ ವರ್ಷಗಳಿಂದ ಸಾರುತ್ತಾ ಬಂದಿದ್ದಾರೆ.

ದಿಟವೇನು?

ಭಾರತದ ಸಂವಿಧಾನದ ೩೪೩ ಕಲಮಿನಲ್ಲಿ, ಭಾರತದ ರಾಷ್ಟ್ರ ಭಾಷೆಯನ್ನು ಕುರಿತು ಸ್ಪಷ್ಟಪಡಿಸಲಾಗಿದೆ. ಭಾರತದಲ್ಲಿ ಒಟ್ಟು ೧೮ ಭಾಷೆಗಳನ್ನು ''ರಾಷ್ಟ್ರ ಭಾಷೆ''ಗಳೆಂದು ಘೋಷಿಸಲಾಗಿದೆ. ಇದರೊಳಗೆ ಅಸ್ಸಾಮಿ, ಬಂಗಾಲಿ, ಪಂಜಾಬಿ, ಮೈಥಿಲಿ, ಹಿಂದಿ, ಗುಜರಾತಿ

ಒರಿಯಾ, ಮಣಿಪುರಿ, ಮರಾಠಿ. ಕನ್ನಡ, ತಮಿಳು, ಕೊಂಕಣಿ, ಮಲೆಯಾಳಂ, ಕಾಶ್ಮೀರಿ, ಉರ್ದು, ಭಾಷೆಗಳೂ ಸೇರಿವೆ.

ಇದಲ್ಲದೆ 'ಅಧಿಕೃತ ಭಾಷೆಗಳ ಕಾನೂನು' ಎನ್ನುವ ಕಾನೂನು ಇದೆ. ಇದು ಕೇಂದ್ರ ಸರ್ಕಾರದ Official ಭಾಷೆಗಳು ಯಾವ್ ಯಾವುವು ಎಂದು ನಿಗದಿ ಪಡಿಸುವ ಕಟ್ಟಳೆ. ಇದರಲ್ಲಿ ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳನ್ನು ಕೇಂದ್ರ ಸರ್ಕಾರದ ಅಧಿಕೃತ ಭಾಷೆಗಳೆಂದು ನಿಗದಿ ಮಾಡಲಾಗಿದೆ ಅಷ್ಟೆ. ಕೇಂದ್ರ ಸರ್ಕಾರದ ಅಧಿಕೃತ ಸಂಪರ್ಕ ಭಾಷೆಯಾದ ಹಿಂದಿ, "ರಾಷ್ಟ್ರಭಾಷೆ" ಯಾದರೆ, ಕೇಂದ್ರ ಸರ್ಕಾರದ ಇನ್ನೊಂದು ಅಧಿಕೃತ ಭಾಷೆಯಾದ ಇಂಗ್ಲೀಷ್ ಕೂಡ "ರಾಷ್ಟ್ರಭಾಷೆ" ಯಾಗಲೇ ಬೇಕು ! ಹೌದೇ?

ಆದರೆ ಈ ಸುಳ್ಳು, ೫೦ ವರ್ಷಗಳಿಂದ, ಸಂವಿಧಾನವನ್ನು ಓದದೇ ಇರುವ ಅಧ್ಯಾಪಕರು 'ಸತ್ಯ'ವನ್ನಾಗಿ ಮಾಡಿಬಿಟ್ಟಿದ್ದಾರೆ. ಈಗ ನಾನು, "ಕೇವಲ ಹಿಂದಿ ಮಾತ್ರವೇ ರಾಷ್ಟ್ರ ಭಾಷೆಯಲ್ಲ ಎಂದು ಹೇಳಿದರೆ, ನನ್ನನ್ನು ರಾಷ್ಟ್ರ ದ್ರೋಹಿಯಂತೆ ಕಾಣುವ ಕಾಲ ಬಂದಿದೆ.

೬. ಕೇವಲ ಹಿಂದೂ ಧರ್ಮದಲ್ಲಿ ಮಾತ್ರ 'ಜಾತಿ'ಯೆಂಬ ರೋಗ ಅಂಟಿದೆ. ಮಿಕ್ಕ ಧರ್ಮಗಳಲ್ಲಿ ಈ ಕಾಯಿಲೆ ಇಲ್ಲ. ಆದುದರಿಂದ ಕೆಳಜಾತಿಯ ಸಮೂಹ ಬೇರೆ ಧರ್ಮಗಳಿಗೆ ಮತಾಂತರ ಹೊಂದುತ್ತಾರೆ, ಎನ್ನುವುದು ದೇಶ ಮೂಲೆ ಮೂಲೆಯಲ್ಲಿ ಕೇಳಿಬರುತ್ತಿದೆ. ಇದು ಎಲ್ಲರ ಅಭಿಪ್ರಾಯವಾಗಿದೆ.

ದಿಟವೇನು?

ಜಾತಿ ಎಂಬುದು ಈ ದೇಶದ ಎಲ್ಲಾ ಧರ್ಮಗಳಿಗೆ ಅಂಟಿದ ಕಾಯಿಲೆಯಾಗಿದೆ.

ಕ್ರಿಶ್ಚಿಯನ್ ಜನಾಂಗದಲ್ಲಿ, ಬ್ರಾಹ್ಮಣರಿದ್ದಾರೆ. ದಲಿತರಿದ್ದಾರೆ. ಅವರಲ್ಲಿ ಸಂಪರ್ಕ, ಮದುವೆ ಸಂಬಂಧಗಳು ಕಡಿಮೆ. ಕೆಲವು ಚರ್ಚುಗಳಲ್ಲಿ ದಲಿತರಿಗೇ ಬೇರೆ ಬೆಂಚುಗಳಿವೆ. ಪತ್ರಿಕೆಗಳಲ್ಲಿ, ಮದುವೆಯ ಸಂಬಂಧಗಳಿಗೆ ಬರುವ ಜಾಹೀರಾತುಗಳಲ್ಲಿ "A Roam Catholic Class 1 Five Figure Salaried groom seeks a Roman Catholic Class 1 Bride" ಎಂದು ಪ್ರಚುರ ಪಡಿಸಲಾಗುತ್ತದೆ. ಇಲ್ಲಿ Class 1 ಅಂದರೆ ಬ್ರಾಹ್ಮಣ ಎಂದೇ ಅರ್ಥ. ನಾನು ಮತಾಂತರ ಪ್ರಚಾರ ಮಾಡುವ ಹಲವಾರು ಪಾದ್ರಿಗಳೊಡನೆ ಮಾತನಾಡಿದ್ದೇನೆ. ಅವರೆಲ್ಲರೂ ಹೇಳುವ ಮಾತು ಒಂದೇ. "ನಾವು ಮತಾಂತರ ಮಾಡಲು ಪ್ರಯತ್ನಿಸುವಾಗ, ಆ ಜನರೆಲ್ಲಾ ತಮ್ಮ ಧರ್ಮವನ್ನು ಬಿಡಲು ಒಪ್ಪಿದರೂ, ತಮ್ಮ ಜಾತಿಯನ್ನು ಬಿಡಲು ಒಪ್ಪುವುದಿಲ್ಲ. ಜಾತಿ ಅವರ ಜನಾಂಗದ ಒಂದು ಒಗ್ಗಟ್ಟಿನ ಕುರುಹಾಗಿದ್ದು, ಅವರ ಬೆಂಬಲವೂ ಆಗಿರುತ್ತದೆ. ಆದ್ದರಿಂದ ನಾವುಗಳು ಅವರುಗಳ ಜಾತಿಗಳನ್ನು ಉಳಿಸಿಕೊಂಡೇ ಅವರನ್ನು ಮತಾಂತರಗೊಳಿಸಬೇಕಾಗುತ್ತದೆ" ಇದರಿಂದಾಗಿಯೇ ಈಗ ಚರ್ಚು, ದಲಿತ ಕ್ರಿಶ್ಚಿಯನ್‌ಗಳಿಗೆ ಸವಲತ್ತು, ಮೀಸಲಾತಿ ಕೊಡಬೇಕೆಂದು ಹೋರಾಟ ನಡೆಸಿರುವುದು. ಇದು ಬಿಡಿ, ದಲಿತ ಕ್ರಿಶ್ಚಿಯನ್‌ಗಳಿಗೆ ಬೇರೆಯೇ ಸ್ಮಶಾನ ಭೂಮಿಗಳಿವೆ ಎಂಬುದು ಗಮನಾರ್ಹ.

ಇದಲ್ಲದೆ ಪ್ರತಿ ಚರ್ಚು, ಬೇರೆ ಬೇರೆಯಾಗಿದ್ದು ಹೊಸ ಹೊಸ ಜಾತಿಗಳು ಹುಟ್ಟಿಕೊಂಡಿವೆ. ಕ್ಯಾಥೋಲಿಕ್, ಪ್ರಾಟೆಸ್ಟೆಂಟ್ ಅಲ್ಲದೆ, ಪ್ರಾಟೆಸ್ಟೆಂಟ್ ಗಳಲ್ಲಿಯೇ, ಮೆಥಾಡಿಸ್ಟ್, ಕ್ಯಾಲ್ವಿನಿಸ್ಟ್, ಬ್ಯಾಪ್ಟಿಸ್ಟ್ ಮುಂತಾದ ಪಂಗಡಗಳಿದ್ದು, ಜಾತಿಗಳಾಗಿವೆ. ಇವರುಗಳಲ್ಲಿ "ಮದುವೆಯಾಗುವುದೇ ಇಲ್ಲ" ಅನ್ನುವುದು ಇಲ್ಲದಿದ್ದರೂ, ಮೊದಲ ಆಯ್ಕೆ ಅಲ್ಲ ಅನ್ನುವುದು ಸ್ಪಷ್ಟ.

ಮುಸಲ್ಮಾನರಲ್ಲಿ, ಷಿಯಾ, ಸುನ್ನಿಯೆಂಬ ಮುಖ್ಯ ಪಂಗಡಗಳಲ್ಲದೆ, ಸೈಯದ್, ಶೇಖ್, ಅನ್ಸಾರಿ, ಖುರೇಷಿ, ಶಿಕಲ್‌ಗಾರ್, ತೇಲಿ ಮುಂತಾದ ಜಾತಿಗಳಿವೆ. ಸೈಯದ್, ಶೇಖ್‌ಗಳು ಇಸ್ಲಾಂನ ಬ್ರಾಹ್ಮಣರಾದರೆ, ಅನ್ಸಾರಿಗಳು ನೇಯ್ಗೆಯವರು, ಶಿಕಲ್‌ಗಾರ್, ಕಲಾಯಿಯವರು, ಖುರೇಷಿಗಳು ಕಟುಕಖಾನೆಯವರು. ಇವರಲ್ಲಿ ಮದುವೆ ಸಂಬಂಧಗಳಿಲ್ಲ, ಹಳ್ಳಿಗಳಲ್ಲಿಯಂತೂ ತುಂಬಾ ಕಟ್ಟುನಿಟ್ಟು.

ಬೌದ್ಧರಲ್ಲಿ, ನವಬೌದ್ಧರೊಂದಿಗೆ ವಿವಾಹ ಸಂಬಂಧ ಕಡಿಮೆ.

**ಹೀಗೆ 'ಸತ್ಯ'ಗಳನ್ನು ಪ್ರತಿಪಾದಿಸುವ ಕಾರ್ಯ ಸತತವಾಗಿ ನಡೆದಿದೆ. ಕಡೆಯಲ್ಲಿ, ಎಲ್ಲಿಯವರೆಗೆ ನಾವು 'ಕಸದ ಬುಟ್ಟಿ'ಗಳಾಗಿರುತ್ತೇವೋ, ಅಲ್ಲಿಯ ತನಕ ನಮ್ಮ ಬುರುಡೆಯಲ್ಲಿ 'ಕಸ'ವನ್ನು ಒಗೆಯುವ ಪರಿಪಾಠ ಬೇರೆಯವರಿಗೂ ಇರುತ್ತದೆ. ಜ್ಞಾನವನ್ನು ಅರ್ಜನೆ ಮಾಡಬೇಕೇ ಹೊರತು, ದಾನ ಎಂದೂ ಬರುವುದಿಲ್ಲ. ಎಲ್ಲವನ್ನು ಒರೆಗಲ್ಲಿಗೆ ಹಚ್ಚಿ ನೋಡುವ ಪರಿಪಾಠ ನಾವು ಬೆಳೆಸಿಕೊಳ್ಳಬೇಕು.** •

## ಪ್ರಕಟಣೆ

ನೇಸರು 2007ರಲ್ಲಿ ತನ್ನ 25ನೇ ವರ್ಷಕ್ಕೆ ಕಾಲಿಡುತ್ತಿದೆ. ಈ ವರ್ಷದ ಪ್ರತಿ ಸಂಚಿಕೆಯನ್ನು ವಿಶೇಷ ಸಂಚಿಕೆಯಾಗಿ ಹೊರ ತರುವ ವಿಚಾರವಿದೆ. ಆದ್ದರಿಂದ ವಾಚಕರಲ್ಲಿ ವಿನಂತಿ ಏನೆಂದರೆ ನಿಮ್ಮ ಅನಿಸಿಕೆಗಳನ್ನು, ಲೇಖನಗಳನ್ನು ದಯವಿಟ್ಟು ಪ್ರಕಟಣೆಗೆ ಕಳುಹಿಸಿ ಕೊಡಿರಿ.

*ಎಲ್ಲರಿಗೂ ಹೊಸ ವರ್ಷದ*
***(2007)***
***ಶುಭಾಶಯಗಳು.***

❀ ❀ ❀

ರವಿವಾರ ಡಿಸೆಂಬರ್ 31, 2006ರ
ಸಂಜೆ 7-30 ಕ್ಕೆ
ಅಸೋಸಿಯೇಷನ್‌ನಲ್ಲಿ
**ಸ್ನೇಹ ಮಿಲನವಿದೆ.**

*ಎಲ್ಲರಿಗೂ ಸ್ವಾಗತ.*

## ಕನಸು

ಮಂಜು ಹನಿಯ
ಸಿಂಚನಕೆ
ತಲೆ ಬಾಗಿ
ನಸು ನಕ್ಕ
ಮಲ್ಲಿಗೆಯ ಕನಸು
ಧಗ ಧಗ
ಬಿರು ಬೇಸಿಗೆಯಲಿ
ಕಮರಿದ ಪಕಳೆಯಂತೆ
ನನಸಿದು
ಬೆಂದೊಡಲ ಕಾವು !

- ಶೋಭಾ ಪ್ರಮೋದ್

# ಡಾ. ದಿವಾಣಜಿ ಅವರ ಪ್ರಸಾದಯೋಗದ ಸೊಗಸು

ಕನ್ನಡ ವಾಙ್ಮಯದಲ್ಲಿ ಕುಸುಮಾಕರ ದೇವರ ಗೆಣ್ಣೂರ ಅವರಿಗೆ ವಿಶಿಷ್ಟವಾದ ಸ್ಥಾನಮಾನವಿದೆ. ಕವಿಯಾಗಿ, ಪ್ರಾಧ್ಯಾಪಕರಾಗಿ, ಅನುವಾದಕರಾಗಿ, ಸಂಶೋಧಕರಾಗಿ, ಕಾದಂಬರಿ ಕಾರರಾಗಿ, ಹೊರನಾಡಿನಲ್ಲಿದ್ದು ಕನ್ನಡವನ್ನು ಮುನ್ನಡೆಸಿದ ಹೆಸರಾಂತ ಸಾಹಿತಿಗಳಲ್ಲಿ ಅವರೂ ಒಬ್ಬರು. ಮುಗಿಯದ ಕತೆ, ನಾಲ್ಕನೆಯ ಆಯಾಮ, ನಿರಿಂದ್ರಿಯ, ಪರಿಧಿ, ಬಯಲು ಬಸಿರು ಅವರ ಪ್ರಸಿದ್ಧ ಕಾದಂಬರಿಗಳು. ಕುಸುಮಾಕರ ದೇವರ ಗೆಣ್ಣೂರ ಕಾವ್ಯನಾಮ ಅವರ ಬರವಣಿಗೆಯ ಅಂಕಿತ. ವಸಂತ ಅನಂತ ದಿವಾಣಜಿ ಅವರ ನಾಮಧೇಯ. ಡಾ. ವಸಂತ ದಿವಾಣಜಿ ಅವರದು ಬಹುಮುಖಿ ಪ್ರತಿಭೆ, ಚಿಂತನಶೀಲ ಮನಸ್ಸು.

'ಪ್ರಸಾದ ಯೋಗ' ಡಾ. ದಿವಾಣಜಿ ಅವರ ಸಂಶೋಧನ ಮಹಾಪ್ರಬಂಧ ಕನ್ನಡದ ನಾಮಾಂಕಿತ ವಿದ್ವಾಂಸ ರಂ. ಶ್ರೀ. ಮುಗಳಿ ಅವರ ಮಾರ್ಗದರ್ಶನದಲ್ಲಿ ಸಿದ್ಧಗೊಂಡ ಈ ಮಹಾಪ್ರಬಂಧಕ್ಕೆ ಪುಣೆ ವಿಶ್ವವಿದ್ಯಾಲಯ ಪಿ.ಎಚ್.ಡಿ. ಪದವಿಯನ್ನು ನೀಡಿ ಗೌರವಿಸಿದೆ. 1972ರಲ್ಲಿ ಮೈಸೂರಿನ ಉಷಾ ಸಾಹಿತ್ಯ ಮಾಲೆ ಈ ಕೃತಿಯನ್ನು ಪ್ರಕಟಿಸಿತ್ತು. ಇತ್ತೀಚೆಗೆ ಮತ್ತೆ ಈ ಶೋಧಪ್ರಬಂಧ ಮರುಪ್ರಕಟಣೆ ಕಂಡಿದೆ. 'ಪ್ರಸಾದ ಯೋಗ' ಪುರಂದರದಾಸರ ಜೀವನ ಹಾಗೂ ಕೃತಿಗಳ ಮೇಲೆ ಹೊಸ ಬೆಳಕು ಚೆಲ್ಲುವ ಮಹತ್ವದ ಕೃತಿ. ಪುರಂದರದಾಸರ ಜೀವನ, ಸಾಧನೆ ಹಾಗೂ ಕೃತಿಗಳ ಬಗೆಗೆ ಇಷ್ಟು ಕರಾರುವಕ್ಕಾಗಿ ಸಮಗ್ರವಾಗಿ ಅಧ್ಯಯನ ಮಾಡಿ ಕೃತಿ ರಚಿಸಿದ ಇನ್ನೊಬ್ಬರ ಹೆಸರನ್ನು ಕನ್ನಡದಲ್ಲಿ ಹೇಳುವುದು ಕಷ್ಟ. ಒಂದು ಒಳ್ಳೆಯ ಸಂಶೋಧನ ಪ್ರಬಂಧ ಹೇಗಿರಬೇಕೆಂಬುದಕ್ಕೆ ಇವತ್ತಿಗೂ ಈ ಕೃತಿ ನಮಗೆ ಮಾದರಿಯಾಗಿದೆ. ''ಪುರಂದರದಾಸರ ಜೀವನ ಅವರ ಸತ್ಯಾನ್ವೇಷಣೆ, ಅವರ ತಪ ಇಂದಿನ ನಾಗರಿಕತೆಗೆ ಪೋಷಕವಾಗಿದೆ. ಬದುಕಿಗೆ ಅವಶ್ಯಕವಾದ ಸತ್ವವನ್ನು ಅವರ ಜೀವನದಲ್ಲಿ ಕಾಣಬಹುದು. ಆದುದರಿಂದ ಅವರ ಜೀವನದ ಹಾಗೂ ಕೃತಿಗಳ ಅಭ್ಯಾಸ ಸಂಸ್ಕೃತಿಯ 'ದೃಷ್ಟಿ'ಯಿಂದ ಪ್ರಯೋಜನಕಾರಿಯಾಗಿದೆ'' ಎಂಬುದನ್ನು ಗಟ್ಟಿಯಾದ ಆಧಾರಗಳಿಂದ ಸಾಬೀತುಪಡಿಸಿದ್ದಾರೆ.

ದಿವಾಣಜಿ ಅವರ ಈ ಶೋಧ ಪ್ರಬಂಧ ಬರೀ ಪುರಂದರದಾಸರ ಜೀವನ ಸಾಧನೆಗಳನ್ನು ಬಣ್ಣಿಸುವುದಕ್ಕೆ ಸೀಮಿತವಾಗಿಲ್ಲ. ಕನ್ನಡ ಹರಿದಾಸ ಪರಂಪರೆ ಇಟ್ಟ ಹೆಜ್ಜೆ ಹಾಗೂ ಅದು ತೊಟ್ಟ ರೂಪವನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ. 'ಹರಿದಾಸ ಕೂಟ' ಪ್ರಸ್ತುತ ಕೃತಿಯ ಮೊದಲ ಅಧ್ಯಾಯ. ಇಲ್ಲಿ ಲೇಖಕರು ನಮ್ಮ ದೇಶದಲ್ಲಿ ವಿಷ್ಣುವಿನ ಆರಾಧನೆ ಹಾಗೂ ಅಲ್ಲಿ ಕಾಲಕಾಲಕ್ಕೆ ನಡೆದ ಪಲ್ಲಟಗಳನ್ನು ಕಣ್ಣಿಗೆ ಕಟ್ಟುವಂತೆ ವಿಶ್ಲೇಷಿಸಿದ್ದಾರೆ. ವಿಷ್ಣುವನ್ನು ಪರಮದೇವತೆಯೆಂದು ಉಪಾಸನೆಯನ್ನೂ ಮಾಡುವ ಸಂಪ್ರದಾಯ ಒಂದು ಕ್ರಿಸ್ತ ಪೂರ್ವದಲ್ಲಿಯೇ ಪ್ರಬಲವಾಗಿತ್ತು. ಋಗ್ವೇದ ಕಾಲದಿಂದ ಹಿಡಿದು ಮಧ್ಯ ಯುಗದ ವರೆಗೆ ವಿಕಸಿಸಿದ ಈ ಮತದ ಇತಿಹಾಸ ಅದ್ಭುತವಾಗಿದೆ. ಋಗ್ವೇದದಲ್ಲಿ, ಸೂಕ್ತಗಳ ಸಂಖ್ಯೆಯ ದೃಷ್ಟಿಯಿಂದ ವಿಷ್ಣು ತೀರ ಸಾಮಾನ್ಯ ತರಗತಿಯ ದೇವತೆ ಎಂದು ಹೇಳಬಹುದು. ಋಗ್ವೇದದಲ್ಲಿ ವಿಷ್ಣುವಿನ ಪಾಲಿಗೆ ಐದೇ ಐದು ಸೂಕ್ತಗಳು ಬಂದಿವೆ''. ಕರ್ನಾಟಕದ ಧಾರ್ಮಿಕ ಇತಿಹಾಸದಿಂದ ವೈಷ್ಣವ ಮತ ಕ್ರಿ.ಶ. ಆರನೆಯ ಶತಮಾನದಲ್ಲಿ ಪ್ರಬಲವಾಗಿತ್ತೆಂದು ತಿಳಿದು ಬರುತ್ತದೆ. ಜೈನ ಮತ ಕಳೆಗುಂದಿದ ಸಂದರ್ಭದಲ್ಲಿ ಶೈವ ವೈಷ್ಣವ ಮತಗಳು ಪ್ರಬಲವಾದವು. ಭಾರತೀಯ ಧಾರ್ಮಿಕ ಪ್ರಪಂಚಕ್ಕೆ ಕರ್ನಾಟಕದ ಕೊಡುಗೆ ಗಣನೀಯವಾಗಿದೆ. ವೈದಿಕ ಪರಂಪರೆಯ ಪ್ರಧಾನ ಮೂರು ಮತಗಳನ್ನು ಭಾರತೀಯ ಸಂಸ್ಕೃತಿಗೆ ನೀಡಿದ ಶ್ರೇಯಸ್ಸು ಕರ್ನಾಟಕಕ್ಕಿದೆ. ಒಂದಲ್ಲ ಒಂದು ರೀತಿಯಿಂದ ಎಲ್ಲ ವೈದಿಕ ಮತಗಳೊಡನೆ ವಿಷ್ಣುವಿನ ಸಂಬಂಧ ಬಂದೇ ಬರುತ್ತದೆ ಎನ್ನುತ್ತಾ ಮಧ್ಯಯುಗದಲ್ಲಿನ ಜನಸಾಮಾನ್ಯರ ಸ್ಥಿತಿಗತಿಯನ್ನು ಹೀಗೆ ವಿವರಿಸಿದ್ದಾರೆ'' ವೈದಿಕ ಸಂಸ್ಕೃತಿಯ ಆತ್ಮ ಎನಿಸಿದ ಸಂಸ್ಕೃತದಲ್ಲಿಯ ಜ್ಞಾನ ಭಂಡಾರ ಜನಸಾಮಾನ್ಯರಿಗೆ ನಿಲುಕದಾಗಿತ್ತು. ಪ್ರಾಕೃತ ಭಾಷೆಗಳ ಸಂಜೀವಿನಿ ಇಲ್ಲದೆ ವೈದಿಕ ಸಂಸ್ಕೃತಿ ಬದುಕಿ ಉಳಿಯುವುದು ಅಸಾಧ್ಯವಾಗಿತ್ತು. ಅದಕ್ಕೆಂದೇ ಮಧ್ಯಯುಗೀನ ಧಾರ್ಮಿಕ ಆಂದೋಲನದಲ್ಲಿ ಪ್ರಾಕೃತ ಭಾಷೆಗಳು ಬಹು ಮಹತ್ವದ ಪಾತ್ರವನ್ನು ವಹಿಸಿದವು. ಪ್ರಾಕೃತ ಭಾಷೆಗಳು ಧಾರ್ಮಿಕ ಶಿಕ್ಷಣದ ಮಾಧ್ಯಮಗಳಾದವು'' ಎಂಬುದಾಗಿ ಸಮಾಜೋ ಭಾಷಾ ವಿಜ್ಞಾನಿಯ ನೆಲೆಯನ್ನು ಅರ್ಥೈಸಿರುವುದು ಉಲ್ಲೇಖನೀಯ ಸಂಗತಿ.

> ಡಾ. ವಸಂತ ಅನಂತ ದಿವಾಣಜಿ ಅವರು ಪ್ರಸಿದ್ಧ ಕಾದಂಬರಿಕಾರರು. ಹಾಗೆಯೇ ಅವರು ಉತ್ತಮ ಸಂಶೋಧಕರು, ಒಳ್ಳೆಯ ವಿಮರ್ಶಕರು ಎಂಬುದಕ್ಕೆ ಅವರ ಸಂಶೋಧನ ಕೃತಿ 'ಪ್ರಸಾದಯೋಗ' ಒಂದು ಉತ್ತಮ ನಿದರ್ಶನ. ಈ ಕೃತಿಯನ್ನು ಇತ್ತೀಚೆಗೆ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠ, ಮರು ಮುದ್ರಣ ಮಾಡಿದೆ. ಆ ಕೃತಿಯ ಕಿರು ಸಮೀಕ್ಷೆ ಇಲ್ಲಿದೆ.
>
> - ಡಾ. ಜಿ.ಎನ್. ಉಪಾಧ್ಯ
> ಕನ್ನಡ ವಿಭಾಗ, ಮುಂಬಯಿ ವಿ.ವಿ.

ಕರ್ನಾಟಕದಲ್ಲಿ ಮಧ್ಯಯುಗದಲ್ಲಿ ಬಾಳಿ ಬದುಕಿದ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದ ಹರಿದಾಸರ ಗುಂಪನ್ನು ಹರಿದಾಸ ಕೂಟ ಎಂದು ಕರೆಯಲಾಗುತ್ತದೆ ಎನ್ನುತ್ತಾ ಹರಿದಾಸ ಕೂಟದ ಮೂಲ ಪುರುಷ ಮಧ್ವಾಚಾರ್ಯರಲ್ಲ ಎಂಬುದನ್ನು ಖಚಿತವಾಗಿ ವಿವರಿಸಿದ್ದಾರೆ. ''ಯಾವುದೇ ಒಂದು ಪಂಥದ ಉಗಮ ಪ್ರಾಚೀನವಾದಷ್ಟು ಆ ಪಂಥದ ಅನುಯಾಯಿಗಳಿಗೆ ಅಭಿಮಾನ ಎನ್ನಿಸುವುದು ಸಹಜವಾಗಿದೆ. ಆದರೆ ಅಭಿಮಾನಕ್ಕೆ ಬಲಿಯಾಗಿ ಆ ಪಂಥದ ಉಗಮ ಅನಾದಿ ಎಂದು ಸಾಧಿಸುವುದರಲ್ಲಿ ಹುರುಳಿಲ್ಲ. ಪಂಥ ಕೇವಲ ಪ್ರಾಚೀನವಾದುದರಿಂದ ಹಿರಿದಾಗುವುದಿಲ್ಲ'' - ಹರಿದಾಸ ಸಾಹಿತ್ಯದ ಪ್ರಾಚೀನತೆಗಿಂತ ಅದು ಮಾಡಿದ ಕಾರ್ಯವನ್ನು ಪರೀಕ್ಷಿಸಬೇಕು ಎಂದು ಮುಲಾಜಿಲ್ಲದೆ ಹೇಳಿದ್ದಾರೆ. ಮತಧರ್ಮಗಳನ್ನು ಕುರಿತು ಸಂಶೋಧನೆಗಿಳಿಯುವವರು ವಸ್ತುನಿಷ್ಠವಾಗಿ ಚಿಂತಿಸಬೇಕೇ ಹೊರತು ಭಾವುಕರಾಗಿ ಆರಾಧನೆಗಿಳಿದರೆ, ಅಭಿಮಾನದ ಮಂಜು ಮುಸುಕಿದರೆ ಸತ್ಯಾಂಶಗಳು ಹುದುಗಿ ಹೋಗುತ್ತವೆ ಎಂಬುದನ್ನು ಎತ್ತಿ ಹೇಳಿದ್ದಾರೆ. ಇದೇ ಮಹಾಪ್ರಬಂಧದಲ್ಲಿ ಡಾ. ದಿವಾಣಜಿ ಅವರ ತರ್ಕ ಸರಣಿ ನಮ್ಮ ಗಮನ ಸೆಳೆಯುತ್ತದೆ. ಅಚಲಾನಂದರು ದಾಸ ಕೂಟದ ಮೂಲ ಪುರುಷರಲ್ಲ ಎಂಬುದನ್ನು ಸಕಾರಣವಾಗಿ ವಿವರಿಸಿದ್ದಾರೆ. ನರಹರಿತೀರ್ಥರದು ಎಂದು ಹೇಳಲಾಗುವ ಪ್ರಕಟಿತ ಕೀರ್ತನೆಗಳು ಭಾಷಾ ದೃಷ್ಟಿಯಿಂದ ಹದಿನಾಲ್ಕನೆಯ ಶತಮಾನದ ಕೀರ್ತನೆಗಳೆಂದು ಕರಾರುವಕ್ಕಾಗಿ ವಿವರಿಸಿದ್ದಾರೆ. ಅಲ್ಲದೆ ನರಹರಿ ತೀರ್ಥರ ಮಾತೃಭಾಷೆ ಕನ್ನಡವಿರಲಿಲ್ಲ. ಅವರು ಸಂಸ್ಕೃತದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. 12 ವರ್ಷಗಳವರೆಗೆ ಉತ್ತರದ ಕಳಿಂಗ ರಾಜ್ಯದ ಅಧಿಕಾರ ಸೂತ್ರವಹಿಸಿದ ಅವರನ್ನು ಹರಿದಾಸ ಕೂಟದ ಪ್ರವರ್ತಕರೆಂದು ತಿಳಿಯಲು ಗಟ್ಟಿ ಆಧಾರಗಳಿಲ್ಲ ಎಂಬುದನ್ನು ದೃಢವಾಗಿ ಸಾರಿದ್ದಾರೆ. ವೀರಶೈವ ವಚನಗಳ ರಚನೆಯಿಂದ ಪ್ರೇರಣೆಗೊಂಡ ವ್ಯಾಸರಾಯರು ವೈಷ್ಣವ ಸಮಾಜವು ಅಜ್ಞಾನದಲ್ಲಿಯೇ ಉಳಿದರೆ ಪರಂಪರೆಯೇ ನಷ್ಟವಾದೀತೆಂಬ ಕಾರಣದಿಂದ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಲು ಮುಂದಾದರು. ''ಕೇವಲ ಸಂಸ್ಕೃತದಲ್ಲಿ ಭಾಷ್ಯಗಳನ್ನು ವಿವೃತಿಗಳನ್ನು ರಚಿಸಿದರೆ ಸಾಲದು ಎಂಬ ವಿಚಾರ ಅವರನ್ನು ಕನ್ನಡದಲ್ಲಿ ಕೃತಿ ರಚನೆಗೆ ಪ್ರೇರೇಪಿಸಿರಬೇಕು. ಇಂಥ ಪ್ರೇರಣೆ ಕನ್ನಡ ಸಂಸ್ಕೃತಿಯಿಂದ ಕನ್ನಡ ಜನತೆಯಿಂದ ದೂರವಾದ ನರಹರಿ ತೀರ್ಥರಿಗೆ ಬಂದಿರಲಿಕ್ಕಿಲ್ಲ'' ಎಂಬ ಡಾ| ದಿವಾಣಜಿ ಅವರ ಅಭಿಪ್ರಾಯ ನಿಜವೇ ಆಗಿದೆ. ವ್ಯಾಸಕೂಟದ ಕುರಿತು ಡಾ. ದಿವಾಣಜಿ ಅವರ ಅಭಿಪ್ರಾಯ ಯಾರನ್ನೂ ಬೆರಗುಗೊಳಿಸದೇ ಇರದು. ಅದು ಇಂತಿದೆ. ವ್ಯಾಸಕೂಟವೆಂಬುದು ಒಂದು ಸಂಸ್ಥೆಯಲ್ಲ. ಈ ವ್ಯಾಸಕೂಟವು ಪುರಂದರ ದಾಸರ ಗುರುಗಳಾದ ಶ್ರೀ ವ್ಯಾಸರಾಯರನ್ನು ಕೇಂದ್ರವನ್ನಾಗಿ ಮಾಡಿಕೊಂಡ ಸಂಘಟನೆಯಲ್ಲ. ವ್ಯಾಸ ಎಂದರೆ ವೇದ ವ್ಯಾಸರಿಗೆ ಸಂಬಂಧಿಸಿದುದು ಎಂದು ಹೇಳಬಹುದು. ವೇದ ವ್ಯಾಸರಿಂದ ಪ್ರಣೀತವಾದ ಕೃತಿಗಳನ್ನು ವ್ಯಾಖ್ಯಾನಿಸಿದ ಶ್ರೀ ಆನಂದ ತೀರ್ಥರ ಸರ್ವ

ಮೂಲಗಳಲ್ಲಿ ಮಾತ್ರ ನಿಷ್ಠೆಯನ್ನು ತೋರಿಸುವ ಸಂಸ್ಕೃತ ಪಂಡಿತರ ಗುಂಪನ್ನು ನಿರ್ದೇಶಿಸಲು ವ್ಯಾಸಕೂಟ ಎಂಬ ಹೆಸರು ಬಹಳ ತಡವಾಗಿ ಬಂದಿತು. ವ್ಯಾಸಕೂಟದ ಬಹಳಷ್ಟು ಪಂಡಿತರಿಗೆ ದಾಸರ ವಿಷಯದಲ್ಲಿ ಆದರ ಬುದ್ಧಿ ಇರಲಿಲ್ಲ ಎಂಬ ವಿಷಯದಲ್ಲಿ ಸಂದೇಹವೇ ಇರಲಿಲ್ಲ. ಉದಾ ಸೋಮನಾಥ ಕವಿ ವಿರಚಿತ ವ್ಯಾಸಯೋಗಿ ಚರಿತದಲ್ಲಿ ಪುರಂದರದಾಸರ ಉಲ್ಲೇಖವೇ ಬಂದಿಲ್ಲ ಎಂಬ ಸತ್ಯವನ್ನವರು ಮೊದಲಬಾರಿಗೆ ಹೊರಹಾಕಿದ್ದಾರೆ. ದಾಸಕೂಟ ಹಾಗೂ ವ್ಯಾಸಕೂಟಗಳಲ್ಲಿನ ತಾತ್ವಿಕ ಮತಭೇದಗಳನ್ನು ಅವರಿಲ್ಲಿ ಸೋದಾಹರಣವಾಗಿ ವಿವರಿಸಿರುವುದು ಡಾ. ದಿವಾಣಜಿ ಅವರ ಸ್ವೋಪಜ್ಞತೆಗೆ ಸಾಕ್ಷಿ. ಆಳವಾದ ವ್ಯಾಸಂಗ, ಹರಿತ ವಿಶ್ಲೇಷಣೆ, ವಿಷಯದ ಸಂಗ್ರಹ ಹಾಗೂ ವಿಧಾನಗಳ ಸಂಯೋಜನೆ ಮೆಚ್ಚತಕ್ಕ ಅಂಶ. ನಮಗೆ ಐತಿಹಾಸಿಕ ಪ್ರಜ್ಞೆ ಸರಿಯಾಗಿಲ್ಲದಿರುವುದರಿಂದ ಆದ ಅನರ್ಥಗಳ ಬಗೆಗೂ ಅವರು ಸೂಕ್ಷ್ಮವಾಗಿ ಚಿಂತನ ನಡೆಸಿದ್ದಾರೆ.

''ಜೀವನ ಚರಿತ್ರೆಗಳನ್ನು, ಇತಿಹಾಸಗಳನ್ನು ಯಥಾರ್ಥವಾಗಿ ಬರೆದಿಡುವ ಕಲೆಯತ್ತ ಭಾರತೀಯರು ಬಹುಶಃ ತಮ್ಮ ಪಾರಲೌಕಿಕ ದೃಷ್ಟಿಕೋನದ ಪ್ರಭಾವದಿಂದಲೇ ಇರಬೇಕು. ಅಷ್ಟೊಂದು ಗಮನಕೊಡಲಿಲ್ಲ. ಭಾರತೀಯ ಸಂಸ್ಕೃತಿಯ ಆಧಾರ ಸ್ತಂಭವೆನಿಸಿದ ರಾಮ ಹಾಗೂ ಕೃಷ್ಣ ಇವರನ್ನು ಕುರಿತು ಪುರಾಣಗಳಿವೆ. ಪುರಾಣಗಳಲ್ಲಿ ಐತಿಹಾಸಿಕ ಭಾಗವಿದ್ದರೂ ಅದು ಕಾವ್ಯದಲ್ಲಿ, ಕಲ್ಪನೆಯಲ್ಲಿ ಶ್ರದ್ಧೆಯಲ್ಲಿ ಕರಗಿ ಹೋಗಿವೆ. ಹೀಗಾಗಿ ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಅನೇಕ ಉಜ್ವಲ ಪುಟಗಳು ಭಾರತೀಯರ ಅವಜ್ಞೆಯಿಂದ ಕಳೆದು ಹೋಗಿವೆ. ರಾಜಕೀಯ ಇತಿಹಾಸ ತಕ್ಕಮಟ್ಟಿಗೆ ಅಲ್ಲಷ್ಟು ಇಲ್ಲಷ್ಟು ಸಿಗುತ್ತದೆ. ಆದರಲ್ಲಿ ಸಂಸ್ಕೃತಿಯ ಸುವರ್ಣ ರೇಖೆಗಳನ್ನು ಗುರುತಿಸುವುದು ಪ್ರಯಾಸದ ಕೆಲಸ. ರಾಜಮಹಾರಾಜರ ವಿಜಯಗಳನ್ನು ವರ್ಣಿಸುವ ಇತಿಹಾಸ ಸಾಮಾಜಿಕ ಸಾಂಸ್ಕೃತಿಕ ಜೀವನವನ್ನು ರೂಪಿಸಿದ ಮಹಾಪುರುಷರ ವಿಷಯದಲ್ಲಿ ಮೌನ ತಾಳಿತು'' ಎಂಬ ವಾಸ್ತವ ಸತ್ಯಗಳತ್ತ ನಮ್ಮ ಗಮನ ಸೆಳೆಯುತ್ತಾರೆ. ಪುರಂದರದಾಸರ ಜೀವನ ಚರಿತ್ರೆಯೂ ಇದಕ್ಕೆ ಹೊರತಾಗಿಲ್ಲ. ಅವರ ವೈಯಕ್ತಿಕ ಬದುಕು, ಕೃತಿಗಳ ಕುರಿತು ಸರಿಯಾದ ಐತಿಹಾಸಿಕ ಪ್ರಮಾಣಗಳು ದೊರೆಯುವುದಿಲ್ಲ. ಹೀಗಾಗಿ ಸಂಶೋಧಕ ದಾರಿ ಅಷ್ಟು ಸರಳವಾಗಿಲ್ಲ ಎಂಬ ಮಿತಿಯನ್ನೂ ಇಲ್ಲಿ ತೋಡಿಕೊಂಡಿದ್ದಾರೆ.

ಪುರಂದರದಾಸರ ಜೀವನ ಚರಿತ್ರೆಯ ಆಕರಗಳನ್ನು ಹೀಗೆ ನಿರೂಪಿಸಿದ್ದಾರೆ ''ತಮ್ಮ ಜೀವನವನ್ನು ಕುರಿತು ತಾನೇ ಹಾಡಿದ ಕೀರ್ತನೆಗಳು, ಅವರನ್ನು ಕುರಿತು ಅವರ ಸಮಕಾಲೀನರು ಬರೆದ ಕೀರ್ತನೆಗಳು, ತರುವಾಯ ದಾಸರು ಅವರನ್ನು ಕುರಿತು ಹಾಡಿದ ಕೀರ್ತನೆಗಳು'' ಇಲ್ಲಿನ ಸತ್ಯಾಂಶಗಳನ್ನು ಹುಡುಕಿ ತೆಗೆಯುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಡಾ. ದಿವಾಣಜಿ ಅವರ ಈ ಕೃತಿಯಲ್ಲಿ ಬೆರಗುಗೊಳಿಸುವ ಅನೇಕ ಒಳನೋಟಗಳಿವೆ. ಪುರಂದರದಾಸರ ಮೊದಲಿನ ಹೆಸರನ್ನು ಕೆಲವರು ಕೃಷ್ಣಪ್ಪ ನಾಯಕನೆಂದು ಕೆಲವರು ಶ್ರೀನಿವಾಸ ನಾಯಕನೆಂದು ಹೇಳುತ್ತಾರೆ. ಅವರ ತಂದೆಯ ಹೆಸರು ವಿಜಯದಾಸರು, ಅವರ ಅನುಗಾಮಿಗಳು ವರದಪ್ಪ ನಾಯಕ ಎಂದು ಹೇಳಿರುವರಾದರೆ ಗುರು ಪುರಂದರದಾಸರು ವಿಠಲನಾಯಕ ಎಂದು ಹೇಳಿದ್ದಾರೆ. ಅವರ ತಾಯಿಯ ಹೆಸರು ರುಕ್ಮಿಣಿ ಎಂದೂ ಲಕ್ಷ್ಮೀ ಎಂದೂ ಬರುತ್ತದೆ. ಅವರ ಹೆಂಡತಿಯ ಹೆಸರು ಸರಸ್ವತಿ, ಲಕ್ಷ್ಮೀ ಗೋತಮೀ ಎಂದು ಹೇಳಲಾಗಿದೆ. ಇವುಗಳಲ್ಲಿ ಯಾವುದನ್ನು ಸತ್ಯವೆಂದು ನಂಬಬೇಕೋ ತಿಳಿಯದು. 1926ರ ಬಳ್ಳಾರಿ ಜಿಲ್ಲೆಯ ಕಮಲಾಪುರದಲ್ಲಿ ದೊರೆತ ಶಾಸನದಲ್ಲಿ ಪುರಂದರದಾಸರ ಮೂವರು ಮಕ್ಕಳ ಹೆಸರು ಬಂದಿರುವುದನ್ನು ತೋರಿಸಿಕೊಟ್ಟಿದ್ದಾರೆ. ಇದೇ ಶಾಸನದಲ್ಲಿ ಅವರನ್ನು ಶ್ರೀ ಪುರಂದರದಾಸಜು ಎಂದು ಸಂಬೋಧಿಸಲಾಗಿದೆ. ಪುರಂದರದಾಸರು ಪುಣೆಯ ಬಳಿಯ ಪುರಂದರಗಡದಲ್ಲಿ ಜನಿಸಿದರು ಎಂಬ ಹೇಳಿಕೆಯಲ್ಲಿ ಸತ್ಯಾಂಶವಿಲ್ಲ. ಪುರಂದರ ಗಡದಲ್ಲಿ ಅವರು ವ್ಯಾಪಾರ ಮಾಡಿ ಶ್ರೀಮಂತರಾದುದು ಆಶ್ಚರ್ಯವೇ. ಏಕೆಂದರೆ ಪುರಂದರ ಗಡ ವ್ಯಾಪಾರಕ್ಕೆ ತಕ್ಕ ಸ್ಥಳವಲ್ಲ. ಪುರಂದರದಾಸರು ಕರ್ನಾಟಕ ಸಂಗೀತ ಪರಂಪರೆಯಲ್ಲಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಆ ಕಾಲದಲ್ಲಿ ಪುರಂದರ ಗಡದಲ್ಲಿ ಕರ್ನಾಟಕ ಸಂಗೀತ ಪರಂಪರೆಯೂ ಇರಲಿಲ್ಲ. ಪುರಂದರದಾಸರು ವಿಠ್ಠಲೋಪಾಸಕರು ಎಂಬ ಒಂದೇ ಕಾರಣದಿಂದ ಅವರು ಮಹಾರಾಷ್ಟ್ರದಲ್ಲಿ ಹುಟ್ಟಿದರು ಎಂದು ಭಾವಿಸುವುದು ಅನುಚಿತವಾಗುತ್ತದೆ. ಆದುದರಿಂದ ದಾಸರ ಜನನ ಕರ್ನಾಟಕ ದಲ್ಲಿಯೇ ಇರಬಹುದಾಗಿದೆ. ಪುರಂದರದಾಸರು ವ್ಯಾಸರಾಯರಿಂದ ದೀಕ್ಷೆಯನ್ನು ಪಡೆದದ್ದು, ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ವಿಜಯನಗರಕ್ಕೆ ಬಂದದ್ದು, ಕುಮಾರ ವ್ಯಾಸ ಹಾಗೂ ಪುರಂದರದಾಸರು ಸಮಕಾಲೀನರಲ್ಲ, ಪುರಂದರದಾಸರ ಪಾಂಡಿತ್ಯ, ಅವರ ಸಾಂಸಾರಿಕ ಬದುಕಿನ ಕುರಿತು ಅನೇಕ ವಿಚಾರಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿದ್ದಾರೆ.

''ಪುರಂದರದಾಸರ ಕೀರ್ತನೆಗಳಲ್ಲಿ ಮಾಧ್ವದರ್ಶನ, ಪುರಂದರದಾಸರು ಬೋಧಿಸಿದ ಲೋಕ ನೀತಿ'' ಎಂಬೆರಡು ಅಧ್ಯಾಯಗಳು ದಿವಾಣಜಿ ಅವರ ಪಾಂಡಿತ್ಯಕ್ಕೆ ಸೃಜನಶೀಲ ಚಿಂತನೆಗೆ ದ್ಯೋತಕ. ''ದಾಸರು ಮಧ್ವಮತದ ದೃಷ್ಟಿಕೋನದಿಂದ ಬದುಕನ್ನು ಕಂಡರು. ಬದುಕಿನ ನೆಲೆಯನ್ನು ವಿಸ್ತರಿಸಲು, ಎತ್ತರಿಸಲು ಸಾಮಾನ್ಯನಿಗೆ ಸಹಾಯ ಮಾಡುವುದಕ್ಕಾಗಿ ಲೋಕನೀತಿಯನ್ನು ಸಾರಿದರು. ಈ ಲೋಕನೀತಿಯ ಸ್ವರೂಪ ಸಾರ್ವತ್ರಿಕವಾದುದು. ಅದು ಯಾವುದೋ ಒಂದು ಮತದ ದೇಶದ ಕಾಲದ ಸ್ವತ್ತಲ್ಲ. ದಾಸರ ಕೀರ್ತನೆಗಳ ಹಿರಿಮೆ ನಿಜವಾಗಿಯೂ ಈ ಲೋಕನೀತಿಯಲ್ಲಿದೆ'' ಎಂಬುದಾಗಿ ದಾಸ ಸಾಹಿತ್ಯದ ಅನನ್ಯತೆಯನ್ನು ಎತ್ತಿ ಹಿಡಿದಿದ್ದಾರೆ.

''ಪುರಂದರದಾಸರ ಕೀರ್ತನೆಗಳು'' ಈ ಕೃತಿಯಲ್ಲಿರುವ ನಮ್ಮ ಕಣ್ಣು ತೆರೆಯಿಸುವ ಲೇಖನ. ''ಕನ್ನಡ ಜನ ಪುರಂದರದಾಸರ ಕೀರ್ತನೆಗಳನ್ನು ಕಳೆದ ನಾಲ್ಕು ನೂರು ವರುಷಗಳಿಂದ ಹಾಡುತ್ತಾ ಬಂದಿದೆ. ಆದರೂ ಅವರ ಕೀರ್ತನೆಗಳನ್ನೆಲ್ಲ ಒಳಗೊಂಡ ಒಂದೇ ಒಂದಾದ ಹಸ್ತಪ್ರತಿಯೂ ದೊರೆತಿಲ್ಲ. ಪಂಡಿತ ಪರಂಪರೆಯ ಬ್ರಾಹ್ಮಣರು ಕನ್ನಡವನ್ನು ಯಾವಾಗಲೂ ಕಡೆಗಣಿಸುತ್ತಾ ಬಂದರು. ಕನ್ನಡ ಭಾಷೆಯ ಸಾಹಿತ್ಯ ಶಾಸ್ತ್ರ ಗ್ರಂಥಗಳಿಗೆ ಅವರು ಸ್ವಲ್ಪವೂ ಗೌರವವನ್ನು ಕೊಡಲಿಲ್ಲ. ಆದರೆ ಜನಸಾಮಾನ್ಯರು ಮಾತ್ರ ಕನ್ನಡಕ್ಕೆ ಶರಣು ಹೊಕ್ಕದ್ದರಿಂದ ಅವರು ದಾಸ ಸಾಹಿತ್ಯವನ್ನು ಇಲ್ಲಿಯವರೆಗೆ ಜೀವಂತವಾಗಿಟ್ಟರು. ದಾಸರ ಕೀರ್ತನೆಗಳೆಲ್ಲ ಬಾಯಿಂದ ಬಾಯಿಗೆ ಪ್ರಸಾರವಾಗುತ್ತಾ ಬಂದಿವೆ. ಅವುಗಳ ಪ್ರಸಾರವೂ ನಾಡಿನ ತುಂಬ ಆಗಿದೆ. ಹೀಗಾಗಿ ಅವುಗಳಲ್ಲಿ ಅನೇಕ ವಿಕೃತಿಗಳು ಹೇರಳವಾಗಿ ಬಂದವೆ. ಅವುಗಳ ಪ್ರಾಮಾಣ್ಯವನ್ನು ಒರೆಗೆ ಹಚ್ಚಿ ಅಪಪಾಠಗಳನ್ನು ನಿವಾರಿಸಿ ಯೋಗ್ಯ ಪಾಠಗಳನ್ನು ಹುಡುಕಬೇಕಾದ ಅಗತ್ಯವನ್ನು ಅವರು ಮೂರುದಶಕಗಳ ಹಿಂದೆಯೇ ಹೇಳಿ ವಿದ್ವತ್ ವಲಯದ ಗಮನಸೆಳೆದಿದ್ದರು.

ಪುರಂದರದಾಸರು ನಾಲ್ಕು ಲಕ್ಷ ಇಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿದ್ದರೂ ಈಗ ದೊರೆತ ಕೀರ್ತನೆಗಳ ಸಂಖ್ಯೆ ಒಂದು ಸಾವಿರದಷ್ಟು ಮಾತ್ರ ಇದೆ. ಅವರು ರಚಿಸಿದ ಸುಳಾದಿಗಳ ಸಂಖ್ಯೆ 55ನ್ನು ದಾಟುವುದಿಲ್ಲ. ಆದುದರಿಂದ ಅವರು ರಚಿಸಿದ ಕೀರ್ತನೆಗಳು ಅಷ್ಟು ಇಷ್ಟು ಎಂದು ಹೇಳಿ ವಾದದ ವೀಳ್ಯವನ್ನು ಎತ್ತುವುದರಲ್ಲಿ ಯಾವ ಔಚಿತ್ಯವೂ ಇಲ್ಲ. ಈಗ ದೊರೆತ ಕೀರ್ತನೆಗಳನ್ನು ಸಂಗ್ರಹಿಸಿ ಅವುಗಳ ಪ್ರಾಮಾಣ್ಯವನ್ನು ಒರೆಗೆ ಹಚ್ಚಿ ಉಚಿತವಾದ ಪಾಠಗಳನ್ನು ಕಂಡುಹಿಡಿಯಬೇಕಾದುದು ಮಹತ್ವದ ಕಾರ್ಯವಾಗಿದೆ ಎಂದು ಈ ದಿಸೆಯಲ್ಲಿ ಮುಂದಡಿಯಿಡುವ ಸಂಶೋಧಕರಿಗೆ ಸೂಚನೆಗಳನ್ನು ನೀಡಿದ್ದಾರೆ. ಪುರಂದರದಾಸರ ಹೆಸರಲ್ಲಿರುವ ಅನೇಕ ರಚನೆಗಳು ಅವರದಲ್ಲ. ಅವು ಪ್ರಕ್ಷಿಪ್ತ. ಕೀರ್ತನೆಗಳನ್ನು ಗುರುತಿಸಲು ಅಂಕಿತಗಳೇ ಪ್ರಾಥಮಿಕ ಸಾಧನ. ಆದರೆ ಆ ಅಂಕಿತವೇ ಬೇರೆ ಬೇರೆಯಾದುದರಿಂದ ಕೀರ್ತನೆಗಳ ಸಾಚಾತನವನ್ನು ಗುರುತಿಸಲು ಶೈಲಿಗೆ ಶರಣು ಹೋಗಬೇಕಾಗುತ್ತದೆ. ಇಲ್ಲೆಲ್ಲ ಸಂಶೋಧಕರು ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬ ಸೂಕ್ಷ್ಮಗಳನ್ನು ಡಾ. ದಿವಾಣಜಿ ಅವರು ವಿವರಿಸಿರುವುದು ಶ್ಲಾಘನೀಯ ಅಂಶ.

ಡಾ. ದಿವಾಣಜಿ ಅವರು ಒಳ್ಳೆಯ ಕವಿಯೂ

MH/MR/ME/093/06-08
Date of Posting : 10-12-2006








# ಸುಂದರ ಕರ್ನಾಟಕಕ್ಕೆ ಸುವರ್ಣ ಮಹೋತ್ಸವ

ಸುಮಾರು 2000 ವರ್ಷಗಳ ಇತಿಹಾಸ ಕನ್ನಡಿಗರದು. ನಾನಾ ಕಾರಣಗಳಿಂದಾಗಿ ಬೇರೆ ಬೇರೆ ಭಾಗಗಳಲ್ಲಿ ಚದುರಿ ಹೋಗಿದ್ದ ಕನ್ನಡಿಗರು ಮತ್ತೆ ನವೆಂಬರ್ 1, 1956ರಂದು ಒಂದಾದರು. ಇದು ಏಕೀಕೃತ ಕರ್ನಾಟಕ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾಹಿತಿಗಳು, ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರು ಹಾಗೂ ಜನಸಾಮಾನ್ಯರ ಪರಿಶ್ರಮ ಮತ್ತು ತ್ಯಾಗವಿದೆ. ಇವರೆಲ್ಲರಿಗೂ ಇಂದು ನಮ್ಮ ನಮನ.

**ಕರ್ನಾಟಕ – 50 ವರ್ಷಗಳ ಒಂದು ಅವಲೋಕನ**

- ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿಶಿಷ್ಟ ಶೈಲಿಯ ವಿಧಾನಸೌಧದ ನಿರ್ಮಾಣ
- "ಉಳುವವನಿಗೆ ಭೂಮಿ" ಕಾಯಿದೆಯನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯ
- ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ದೇಶಕ್ಕೆ ಮಾದರಿಯಾದ ರಾಜ್ಯ
- ಆಡಳಿತ ವಿಕೇಂದ್ರೀಕರಣದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ದೇಶದ ಮೊದಲ ಮಾದರಿ ರಾಜ್ಯ
- ಸಾಕ್ಷರತೆಯಲ್ಲಿ ಗಣನೀಯ ಸಾಧನೆ - ಕೇವಲ ಶೇ.24 ರಷ್ಟಿದ್ದ ಸಾಕ್ಷರತೆ ಈಗ ಶೇ.71ಕ್ಕೆ ಏರಿಕೆ
- ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ
- ನೀರಾವರಿ ಸಾಮರ್ಥ್ಯ - 23.84 ಲಕ್ಷ [illegible] ಜಮೀನಿಗೆ ನೀರಾವರಿ ಸೌಲಭ್ಯ
- ವಿಶ್ವಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ "ಭೂಮಿ" ಯೋಜ[illegible] ರೈತರಿಗೆ ಕಂಪ್ಯೂಟರ್ ಮೂಲಕ ಪಹಣಿ ವಿತರಿಸಿದ ಪ್ರಪ್ರಥಮ ರಾಜ್ಯ
- ಮಾಹಿತಿ ತಂತ್ರಜ್ಞಾನದಲ್ಲಿ ಇಡೀ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ





ಎಚ್ ಡಿ ಕುಮಾರಸ್ವಾಮಿ
ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನ ಅಪೂರ್ವ ಸಂಸ್ಕೃತಿ ಮತ್ತು ಭವ್ಯ ಪರಂಪರೆಯನ್ನು ಎತ್ತಿ ಹಿಡಿಯೋಣ. ಅಧಿಕ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗೋಣ.



ಬಿ ಎಸ್ ಯಡಿಯೂರಪ್ಪ
ಮಾನ್ಯ ಉಪ ಮುಖ್ಯಮಂತ್ರಿಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಕರ್ನಾಟಕದ ಜನತೆಗೆ ಸುವರ್ಣ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು**

ಕರ್ನಾಟಕ ವಾರ್ತೆ

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 • Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938